ಸಮುದಾಯ ಪ್ರಕಾಶನ

ಬೆಂಗಳೂರು - ೫೬೦ ೦೦೪

~~Price : Rs. 0-75~~ Price : Rs. 1-25

ಈ ಹಸ್ತಪ್ರತಿಯ ಭಾಗಶಃ ಮುದ್ರಣದ
ವೆಚ್ಚವನ್ನು ''ಪ್ರಗತಿಪರ ಜನತಂತ್ರರಂಗ'' ಬೆಂಗಳೂರು
ಇವರು ವಹಿಸಿಕೊಂಡು ಸಹಕರಿಸಿದ್ದಾರೆ. ಇವರಿಗೆ
'ಸಮುದಾಯ ಪ್ರಕಾಶನ'ದ ಕೃತಜ್ಞತೆಗಳು.

ಈ ಕೃತಿಯನ್ನು ಪ್ರಕಟಿಸಲು
ಅನುಮತಿ ನೀಡಿದ ಶ್ರೀ ಬಸವರಾಜು
ಅವರಿಗೆ 'ಸಮುದಾಯ ಪ್ರಕಾಶನ'ದ
ಕೃತಜ್ಞತೆಗಳು.

SAMUDAYA PRAKASHANA
46 SHOP STREET
BASAVANAGUDI
BANGALORE-560 004

ಶಿವಮೊಗ್ಗ ರೈತ ಚಳವಳಿ

ನೆನಪು ಈಗಲೂ ಹಸಿರಾಗಿದೆ. ಅಂದು ಸೋಮವಾರ, ಸೆಪ್ಟೆಂಬರ್ ಒಂದು 1980. ಮಲೆನಾಡ ರೈತರ ಬೃಹತ್ ರ್‍ಯಾಲಿಯೊಂದು ಶಿವಮೊಗ್ಗೆಯಲ್ಲಿ ನಡೆಯುವುದಿತ್ತು. ಹತ್ತು ಗಂಟೆಗೆ ಈ ರ್‍ಯಾಲಿ ವಿಜ್ಞಾನ ಮೈದಾನದಿಂದ ಹೊರಟು ಶಿವಮೊಗ್ಗದ ಬೀದಿಗಳನ್ನು ಸುತ್ತಿ ಪುರಸಭೆಯ ಮುಂದಿನ ಆವರಣದಲ್ಲಿ ಸಭೆ ಸೇರಲಿತ್ತು. ಸುಮಾರು 25,000 ರೈತರು ಜಿಲ್ಲೆಯ ಎಲ್ಲ ಭಾಗಗಳಿಂದ ಬರಲಿದ್ದಾರೆ ಎಂದು ವ್ಯವಸ್ಥಾಪಕರು ಹೇಳಿದ್ದರು.

ನನಗೆ ತಡೆಯಲಾಗದ ಕುತೂಹಲ. ಇಷ್ಟೊಂದು ದೊಡ್ಡ ಪ್ರಮಾಣದ ರೈತರ ರ್‍ಯಾಲಿಯನ್ನು ಪ್ರಥಮ ಬಾರಿಗೆ ನೋಡುವವನಿಗೆ ಸಹಜವಾಗಿಯೇ ಇರಬಹುದಾದ ಆತುರ ಕಾತುರ. ಒಂಭತ್ತುವರೆಗೇ ರ್‍ಯಾಲಿ ಹೊರಡುವ ಜಾಗಕ್ಕೆ ಬಂದು ಕಾಯುತ್ತ ಕುಳಿತೆ. ಗಂಟೆ ಹತ್ತಾದರೂ ಒಂದೂ ಹಸಿರು ಟೋಪಿ ಕಾಣಲಿಲ್ಲ. ಚಡಪಡಿಸುತ್ತಾ, ಅತ್ತ-ಇತ್ತ ಓಡಾಡುತ್ತ, ಪ್ರೀತಿಯಿಂದ, ಕೋಪದಿಂದ, ಅಸಹನೆಯಿಂದ ರೈತರಿಗಾಗಿ ಹುಡುಕಾಡಿದೆ. ರೈತ ಮುಖಂಡರೂ ಕಾಣಲಿಲ್ಲ. ಗಡಿಯಾರದ ಮುಳ್ಳು ಹನ್ನೊಂದನ್ನೂ ದಾಟಿತು. ನಿರಾಶೆಯಿಂದ ಹತ್ತಿರದ ಹೋಟೇಲಿಗೆ ನಡೆದು ಕಾಫಿ ಕುಡಿದು ಸಮಾಧಾನ ತಂದುಕೊಳ್ಳಲು ಹೆಣಗಿದೆ. ಮತ್ತೆ ಹೊರಬಂದೆ. ಅದೇ ತರಾತುರಿ. ರ್‍ಯಾಲಿಯೇ ನಡೆಯಲಾರದೇನೋ ಎಂಬ ಅನುಮಾನ ಸುಳಿಯಿತು. ಹನ್ನೆರಡು ಗಂಟೆಯ ಸಮಯ, ಮಧ್ಯಾಹ್ನದ ಬಿಸಿಲು ಪ್ರಖರವಾಗಿತ್ತು. ಹಸಿರು ಟೋಪಿ, ರುಮಾಲುಗಳ ರೈತ ಮುಖಂಡರು ಹಸಿರು ಮೈದಾನದಲ್ಲಿ ಬಂದು ಸೇರಲಾರಂಭಿಸಿದರು. ಒಬ್ಬರ ಬಳಿ ಹೋದೆ. 'ಎಲ್ಲಿ ನಿಮ್ಮ 25,000 ರೈತರ ರ್‍ಯಾಲೀ?' ಎಂದೆ. ಅವರು ಕವಳ ಜಗಿಯುತ್ತಲೇ ಹೇಳಿದರು,' ಸ್ವಲ್ಪ ಇರಿ ಸಾರ್, "ಹೇಳಿ ಕೇಳಿ ನಾವು ರೈತರು. [illegible] ಸಾವಿರಾರು ಮಂದಿ ಬಂದ್ರೆ ಇಲ್ಲಿ ಊಟ ಹಾಕೋರು ಯಾ[illegible] ಹೇಳೀವಿ. ಒಂದೀಟ್ ತಡ ಆದೀತು........"

ಹನ್ನೆರಡೂವರೆ : ಮೊದಲ ತಂಡ ಬಂತು. ಹಸಿರು ಟೋಪಿ-ರುಮಾಲು ಮುಂದುಗಡೆ ತಮಟೆ ಬಡಿಯುವವರು, ಕುಣಿಯುವವರು, ಹಿಂದೆ ಬ್ಯಾನರ್ ಹಿಡಿದ ವರು, ಘೋಷಣೆ ಕೂಗುವವರು, ಉತ್ಸಾಹವೋ ಉತ್ಸಾಹ. ರೈತರಿಗೆ ಜಯಕಾರ ಹಾಕುತ್ತಾ ಸರ್ಕಾರಕ್ಕೆ ಧಿಕ್ಕಾರ ಹಾಕುತ್ತ ವಿಜ್ಞಾನ ಮೈದಾನ ಪ್ರವೇಶಿಸಿದ ಈ ಗುಂಪಿಗೆ ಮೊದಲೇ ನಿಗದಿಪಡಿಸಿದ್ದ ಜಾಗದಲ್ಲಿ ಕುಳಿತುಕೊಳ್ಳಲು ಮುಖಂಡರು ಹೇಳಿ ದರು. ನಂತರ ತಂಡದ ಮೇಲೆ ತಂಡ, ನಡೆದುಕೊಂಡು, ಗಾಡಿಯಲ್ಲಿ ಟ್ರಾಕ್ಟರಿ ನಲ್ಲಿ, ಲಾರಿಯಲ್ಲಿ ಬಸ್ಸುಗಳ ಟಾಪಿನ ಮೇಲೆ ಸುತ್ತ ಎಂಟೂ ದಿಕ್ಕುಗಳಿಂದ ರೈತರೋ ರೈತರು. ತಮಟೆ, ಕಹಳೆ, ಕೊಂಬು, ಇತ್ಯಾದಿ ಜನಪದ ರಂಗಿನಲ್ಲಿ ಹರಿದ ಉತ್ಸಾ ಹದ ಹೊಳೆ. ಹಸಿರು ವಸ್ತ್ರ ಸಿಗದವರು ಹಸಿರು ಪೈರನ್ನು ಕಿತ್ತು ಹಿಡಿದುಕೊಂಡು ಬಂದಿದ್ದರು. ಶಿವಮೊಗ್ಗೆಯ ನಾಗರಿಕರು ಹಿಂದೆಂದೂ ಕಂಡರಿಯದಷ್ಟು ರೈತ ಸ್ತೋಮ. ಮಲೆನಾಡಿನ ಮೂಲೆ ಮೂಲೆಗಳಿಂದ, ಕಾಡು-ಮೇಡುಗಳಿಂದ, ಗಿರಿ, ಶಿಖರಗಳಿಂದ ಬಂದಿಳಿದರೋ ಎಂಬಷ್ಟು ಜನ. ಮುಖಂಡರ ಅಂದಾಜು ಸಂಖ್ಯೆ ಹತ್ತಿರವಾಗುತ್ತಿತ್ತು. ರೈತರ ವೈರಿಯೂ, ಇಪ್ಪತ್ತು ಸಾವಿರಕ್ಕೆ ಕಡಿಮೆಯಿಲ್ಲ ಎಂದು ಹೇಳುವಂತಿತ್ತು.

ಮಧ್ಯಾಹ್ನ ಎರಡು ಗಂಟೆಗೆ ಮೆರವಣಿಗೆ ಹೊರಟಿತು. ನಗರದ ಬೀದಿಗಳಲ್ಲಿ ರೈತ ಸಾಮರ್ಥ್ಯದ ಪ್ರದರ್ಶನ. ಕೇವಲ ಎರಡು ಮೂರು ಸಾವಿರ ರೈತರು ಸೇರ ಬಹುದೆಂದು ಅಂದಾಜು ಮಾಡಿದ್ದ ಪೋಲೀಸ್ ಇಲಾಖೆಯ ತಲೆಕೆಳಗು. ಕೇವಲ ಮುನ್ನೂರು ಪೋಲೀಸರು. ನೂರು ಜನ ಗೃಹರಕ್ಷಕ ಪಡೆ ಮತ್ತಿತರ ಸಿಬ್ಬಂದಿಯ ವರು ದಂಗಾಗಿ ಮೆರವಣಿಗೆಯನ್ನು ಹಿಂಬಾಲಿಸುತ್ತಿದ್ದರು. ರೈತ ಸ್ವಯಂ ಸೇವಕರೇ ಮೆರವಣಿಗೆಯನ್ನು ನಿಯಂತ್ರಿಸುತ್ತಿದ್ದರು.

ಇಡೀ ಶಿವಮೊಗ್ಗ ನಗರಕ್ಕೆ ಬೆಂಕಿ ಹಾಕಿ, ಉನ್ಮಾದದಿಂದ ಕುಣಿಯುತ್ತ ತಮ್ಮ ತಮ್ಮ ಊರು ಸೇರಿಕೊಳ್ಳಬಹುದಾದಷ್ಟು ದೊಡ್ಡ ಸಂಖ್ಯೆಯಲ್ಲಿದ್ದ ರೈತ ಸಮೂಹ ಗಾಂಧೀ ಭಾವಚಿತ್ರದ ಅಡಿಯಲ್ಲಿ ಅತ್ಯಂತ ಶಿಸ್ತು ಮತ್ತು ಶಾಂತಿಯಿಂದ ಪ್ರದರ್ಶನ ಮುಗಿಸಿತ್ತು. ಯಾವ ಅಹಿತಕರ ಘಟನೆಯೂ ನಡೆಯಲಿಲ್ಲ.

ನಂತರ ಬಹಿರಂಗ ಸಭೆ: ತಮಿಳ್ನಾಡು ರೈತ ಮುಖಂಡರಾದ ನಾರಾಯಣ ಸ್ವಾಮಿ ನಾಯ್ಡು, ಶಿವಸ್ವಾಮಿ, ಮತ್ತಿತರರ ಭಾಷಣ. ಮುಖಕ್ಕೆ ರಾಚುತ್ತಿದ್ದ ಬಿಸಿಲನ್ನು ಲೆಕ್ಕಿಸದೆ ಕಿವಿ ತೆರೆದು ಕುಳಿತ ಹಸಿರು ಟೋಪಿಗಳು, ಮುಂಡಾಸುಗಳು;

ವೈಮರೆತು ಉದ್ವೇಗದಿಂದ ವಿಚಾರ ಬಿಚ್ಚುತ್ತಿದ್ದ ಮುಖಂಡರು; ಸರಳ ವಿಚಾರ, ಸರಳ ನಿರೂಪಣೆ ಎಲ್ಲರೂ ಬಲ್ಲ ನಿದರ್ಶನಗಳು. "ನಿಮ್ಮ ಕೂಸುಗಳಿಗೆ ನೀವೇ ಹೆಸರಿಡಬೇಕು, ದಿಲ್ಲಿಯುವರಲ್ಲ. ನೀವು ಬೆಳೆದ ಕಾಳಿಗೆ ಬೆಲೆ ಕಟ್ಟುವವರು ನೀವೇ, ದಿಲ್ಲಿಯುವರಲ್ಲ. ಹಾವಾಡಿಗರು, ಭಿಕ್ಷುಕರು ಸಂಘಕಟ್ಟಿ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಾರೆಂದರೆ ರೈತರು ಯಾಕೆ ಸಂಘಟಿತರಾಗಬಾರದು? 'ಅಪ್ಪಣೆಇಲ್ಲದೆ ಪ್ರವೇಶವಿಲ್ಲ' ಎಂಬ ಬೋರ್ಡ್‌ನ್ನು ನಿಮ್ಮ ಹೊಲಗಳಿಗೆ ಹಾಕಿ, ಊರುಗಳಿಗೆ ಹಾಕಿ. ಸರ್ಕಾರಿ ಅಧಿಕಾರಿಗಳು, ಬ್ಯಾಂಕಿನವರು ನಿಮ್ಮ ಅಪ್ಪಣೆ ಪಡೆದು ಒಳಗೆ ಬರಲಿ. ದೇಶಕ್ಕೆ ಅನ್ನ ಹಾಕುವವರು ನೀವು. ನಿಮಗೆ ಬೆಲೆ ಇಲ್ಲವಾ?" ಇತ್ಯಾದಿ.

ಉಂಡಿದ್ದವರೆಷ್ಟೋ, ಉಣ್ಣದೇ ಮುಖ ಬಾಡಿಸಿಕೊಂಡಿದ್ದವರೆಷ್ಟೋ. ಎಲ್ಲ ಮುಖಗಳಲ್ಲೂ ಉತ್ಸಾಹಕಳೆ. ಹುಮ್ಮಸ್ಸು, ಎಲ್ಲರೂ ತಲೆದೂಗಿದರು. ನಾಯಕ್ರು ಹೇಳುವುದು ನಿಜ ಎಂದರು. ನಿಧಾನಕ್ಕೆ ಮನಸ್ಸಿನ ಆಳಕ್ಕೆ ಇನಿಯುತ್ತಿದ್ದ ವಿಚಾರಗಳನ್ನು ಗಟ್ಟಿ ಮಾಡಿಕೊಂಡರು. ಹೋರಾಟದ ನಿರ್ಧಾರಕ್ಕೆ ಮೌನವಾಗಿಯೇ ಅನುಮತಿ ಸೂಚಿಸಿದರು.

ಮಲೆನಾಡ ರೈತರ ಹೋರಾಟ ಆರಂಭವಾದದ್ದು ಹೀಗೆ : ಮಲೆನಾಡ ರೈತ ಒಳಗೇ ಕುದಿಯುತ್ತಿದ್ದ. ಅನೇಕ ವರ್ಷಗಳಿಂದ ಸಂಘಟನೆಯ ಕಾರ್ಯವು ಒಳಗೇ ನಡೆಯುತ್ತಿತ್ತು ಎನ್ನುತ್ತಾರೆ, ರೈತ ಮುಖಂಡರು. ರೈತ ಕಳೆದ ಮೂವತ್ತು ವರ್ಷಗಳಿಂದಲೂ ಶೋಷಣೆಗೀಡಾಗಿರುವವನು ಎಂಬುದು ನಿಜವಾದರೂ, ಈ ಅರಿವು ಪ್ರತ್ಯೇಕವಾಗಿ ಸಣ್ಣ–ಪುಟ್ಟ ರೈತರಿಗೆ ಇರಲಿಲ್ಲ. 'ನಮ್ಮ ಹಣೆಯ ಬರಹವೇ ಹೀಗೆ' ಎಂಬ ಮನೋಭಾವವನ್ನು ಮೈಗೂಡಿಸಿಕೊಂಡಿದ್ದ ಆನೇಕ ರೈತರು ವಾಸ್ತವಕ್ಕೆ ಬೆನ್ನುಮಾಡಿ ನಿರ್ಲಿಪ್ತರಾಗಿದ್ದರು. ಇವರಿಗೆ ವಾಸ್ತವದ ಅರಿವು ಮಾಡಿಕೊಡುವ, ಹೋರಾಟದ ಹಕ್ಕನ್ನು ತಿಳಿಸಿಕೊಡುವ ಕಾರ್ಯ ವ್ಯವಸ್ಥಿತವಾಗಿ ನಡೆದಿರಲಿಲ್ಲ. ಆದರೆ ನೀರಾವರಿ ಬೆಳೆಗಾರರು ವಿಶೇಷವಾಗಿ ಕಬ್ಬು ಬೆಳೆಗಾರರು ಶೋಷಣೆಯನ್ನು ಅರಿಯಲೇಬೇಕಾದ ಪರಿಸ್ಥಿತಿ ಉಂಟಾಗಿತ್ತು.

ರೈತ ಮುಖಂಡರು ಹೇಳುವಂತೆ ಆಗತಾನೆ ಅರಸು ಸರ್ಕಾರ ಅಧಿಕಾರಕ್ಕೆ ಬಂದಿತ್ತು. ಆಗ ಈ ಭಾಗದಲ್ಲಿ ಭತ್ತ ಬೆಳೆಯುತ್ತಿದ್ದ ರೈತ ನೀರಿಗಾಗಿ ಪ್ರತಿ ಎಕ್ರೆಗೆ ವರ್ಷಕ್ಕೆ ಕೊಡುತ್ತಿದ್ದ ಕರ ಹತ್ತು ರೂಪಾಯಿ. ಅರಸು ಇದನ್ನು 25 ರೂ.ಗೆ ಏರಿಸಿದರು. ತುಸು ಕಾಲದ ನಂತರ ಪ್ರತಿ ವರ್ಷಕ್ಕಿದ್ದ ತೆರಿಗೆಯನ್ನು ಪ್ರತಿ ಬೆಳೆ

ಗೆಂದು ಮಾಡಿ ರೈತ ಪ್ರತಿ ಬೆಳೆಗೆ ಎಕರೆಗೆ 37 ರೂ. ನೀಡಬೇಕೆಂದು ಮಾಡಲಾಯಿತು. ಇದೇ ರೀತಿ ಕಬ್ಬು ಬೆಳೆಗಾರರು ಪ್ರತಿ ಎಕರೆಗೆ ಕೊಡುತ್ತಿದ್ದ ನೀರಿನ ಕರಿಗೆ ರೂ. 20 ರಿಂದ 40ಕ್ಕೆ, ನಂತರ ರೂ. 80ಕ್ಕೆ ಕೊನೆಗೆ ರೂ. 300ಕ್ಕೆ ಏರಿತು. ಜೊತೆಗೆ ಭದ್ರಾ–ತುಂಗಾ ಯೋಜನೆಯ ನೀರು ಉಪಯೋಗಿಸುವ ರೈತರು ನೀರಾವರಿ ಅಭಿವೃದ್ಧಿ ತೆರಿಗೆಯೆಂದು ಎಕ್ರೆಗೆ 500 ರೂ. ನೀಡುತ್ತಿದ್ದು, ಇದನ್ನು ರೂ.1500ಕ್ಕೆ ಏರಿಸಲಾಯಿತು.

ಅರಸು ಕಾಲದಲ್ಲಿಯೇ ಕಬ್ಬು ಬೆಳೆಗಾರರು ಪ್ರತಿಬೆಳೆಗೆ ಕೊಡುತ್ತಿದ್ದ 4 ರೂ. ಸೆಸ್ ರೂ. 19–60ಕ್ಕೆ ಏರಿತು. ಈ ಭಾಗದ ರೈತ ಮಳೆ ನೀರಿಗೂ ಕಂದಾಯ ಕೊಡಬೇಕಾದ (ಎಕ್ರೆಗೆ ವರ್ಷಕ್ಕೆ 25 ರೂ.) ಪರಿಸ್ಥಿತಿಯೂ ಬಂತು.

ಈ ಎಲ್ಲ ಕರಗಳ ಏರಿಕೆಯಿಂದ ರೈತರು ಸಹಜವಾಗಿಯೇ ಸಿಟ್ಟಿಗೆದ್ದಿದ್ದರು. ಕಬ್ಬು ಬೆಳೆಗಾರರಿಗೆ ದೊಡ್ಡ ಏಟು ಬಿದ್ದಿತ್ತು. ಹಾಗೆಯೇ ನೀರಾವರಿ ಬೆಳೆಗಾರರಿಗೆ ಸಣ್ಣ ಏಟು ಬಿದ್ದಿತೆಂಬುದೂ ನಿಜ. ಇವರೆಲ್ಲ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಲೇ ಬಂದಿದ್ದರು. ಸರ್ಕಾರ ಉಪೇಕ್ಷಿಸುತ್ತಲೇ ಬಂದಿತ್ತು. ಜೊತೆಗೆ ರಾಜ್ಯದ ಇತರ ರೈತರಂತೆ ಈ ಭಾಗದ ರೈತರ ಬದುಕೂ ಅಸಹನೀಯವಾಗಿತ್ತು. ರಸಗೊಬ್ಬರಗಳ ಬೆಲೆ, ಕ್ರಿಮಿ–ಕಳೆ ನಾಶಕಗಳ ಬೆಳೆ, ಕೃಷಿ ಯಂತ್ರೋಪಕರಣಗಳ ಬೆಲೆ, ಉತ್ತಮ ತಳಿ ಬೀಜಗಳ ಬೆಲೆ ಅಗಾಧವಾಗಿ ಏರಿದ್ದು, ರೈತ ಬೆಳೆದ ಧಾನ್ಯಕ್ಕೆ ಯೋಗ್ಯ ಬೆಲೆ ದೊರೆಯದ ಪರಿಸ್ಥಿತಿ. ಇದೆಲ್ಲ ಪ್ರಬಲ ಸಂಘಟನೆಯೊಂದನ್ನು ಬಯಸುತ್ತಿತ್ತು.

ಈ ಜಿಲ್ಲೆಯ ರೈತನನ್ನು ರೊಚ್ಚಿಗೇಳಿಸುವ ಮತ್ತೊಂದು ಸಂಗತಿ ಏಪ್ರಿಲ್-ಮೇ (1980)ನಲ್ಲಿ ನಡೆಯಿತು. ಬೇಸಿಗೆಯ ಭತ್ತದ ಬೆಳೆ ಇನ್ನೇನು ಕೈ ಸೇರಬೇಕು. ಆಗ ಮುಂಚಿತವಾಗಿಯೇ ಆರಂಭವಾಯಿತು ಮುಂಗಾರು. ಧಾರಾಕಾರವಾಗಿ ಸುರಿದ ಭಾರೀ ಮಳೆಯಿಂದಾಗಿ ಸುಮಾರು ಒಂಭತ್ತು ಕೋಟಿ ರೂಪಾಯಿ ಮೌಲ್ಯದ ಭತ್ತ ಹಾಳಾಯಿತೆಂದು ರೈತ ಮುಖಂಡರು ಹೇಳುತ್ತಾರೆ. ಶೇ. 50ರಷ್ಟು ಬೆಳೆ ಮಾತ್ರ ರೈತನ ಪಾಲಿಗೆ. ಅದಕ್ಕೂ ಸರಿಯಾದ ಬೆಲೆ ದೊರೆಯುಲಿಲ್ಲ. 42ರೂ.ಗೆ ಕ್ವಿಂಟಾಲ್ ಭತ್ತವನ್ನು ಮಾರುವ ದುರ್ಗತಿ. ಹತಾಶನಾದ ರೈತ ಸರ್ಕಾರದ ಪರಿಹಾರಕ್ಕೆ ಕೈ ಚಾಚಿದ. ಸರ್ಕಾರಿ ಅಧಿಕಾರಿಗಳು ಹೊಲಗಳಿಗೆ ಭೇಟಿನೀಡಿ ತಮ್ಮದೇ ಆದ ರೀತಿಯಲ್ಲಿ ನಷ್ಟದ ಅಂದಾಜು ಮಾಡಿ ಹೇಳಿಕೆಗಳನ್ನು ನೀಡಿ ಹೊರಟು ಹೋದರು. ಆದರೆ ಪರಿಹಾರದ ಹಣ ಮಾತ್ರ ದೊರೆಯುಲಿಲ್ಲ. (ಸೆಪ್ಟೆಂಬರ್ 1ರವರೆಗೆ ಹಣ ಬಂದಿರಲಿಲ್ಲ)

ಈ ಎಲ್ಲ ಘಟನೆಗಳೇ ರೈತನನ್ನು ಹೋರಾಟಕ್ಕೆ ಅಣಿ ಮಾಡಿದ್ದವು. ಇದೇ ಸಮಯಕ್ಕೆ ನರಗುಂದ ನಡೆದು ಹೋಯಿತು. ಮಲೆನಾಡ ರೈತ ಮುಖಂಡರು ಕೂಡಲೇ ಜಾಗೃತರಾದರು. ಜಿಲ್ಲೆಯ ಮೂಲೆ ಮೂಲೆಯಲ್ಲೂ ಸುತ್ತಿ ರೈತರನ್ನು ಎಚ್ಚರಿಸುವ ಕಾರ್ಯಕ್ಕೆ ತೊಡಗಿದರು. ಬೆಳೆಗಳ ಬಗ್ಗೆ, ಉತ್ಪಾದನಾ ವೆಚ್ಚಗಳ ಬಗ್ಗೆ, ಸರ್ಕಾರಗಳು ರೈತರಿಗೆ ಮಾಡಿದ ಅನ್ಯಾಯಗಳ ಬಗ್ಗೆ, ಕಳೆದ ಮೂವತ್ತು ವರ್ಷಗಳಿಂದ ರೈತ ಬದುಕುತ್ತಿರುವ ದಾರುಣ ಬದುಕಿನ ಬಗ್ಗೆ ತಿಳಿಯ ಹೇಳುವ ಸಭೆಗಳು, ಚಾವಡಿ ಕಟ್ಟೆಯ ಕೂಟಗಳು ತಾಲ್ಲೂಕು ಕೇಂದ್ರಗಳಲ್ಲಿ, ಹಳ್ಳಿಹಳ್ಳಿಗಳಲ್ಲಿ ನಡೆದವು. ರೈತ ಕಣ್ಣುಬಿಟ್ಟು ವಾಸ್ತವವನ್ನು ನೋಡಲಾರಂಭಿಸಿದ. ರೈತ ಕ್ರಿಯಾ ಸಮಿತಿಗಳು ಉದಯವಾಗತೊಡಗಿದವು.

ಈ ಕೆಲಸ ಇಷ್ಟೊಂದು ಅಚ್ಚುಕಟ್ಟಾಗಿ ಬಿರುಸಿನಿಂದ ನಡೆದುದಕ್ಕೆ ಮುಖ್ಯ ಕಾರಣ ರೈತ ಮುಖಂಡರೆಲ್ಲ ಒಂದು ಸಂಘಟನೆಯಡಿ ಬಂದು ನಿಂತದ್ದು. ತಮ್ಮ ರಾಜಕೀಯ ಹಿತಾಸಕ್ತಿಗಳನ್ನೆಲ್ಲ ಮರೆತು ಪಕ್ಷಾತೀತ ರೈತ ಸಂಘಟನೆಯನ್ನು ಮುಖ್ಯ ಉದ್ದೇಶ ಮಾಡಿಕೊಂಡಿದ್ದು ಸೆಪ್ಟೆಂಬರ್ ಒಂದರ (1980) ವೇಳೆಗೆ ಹೊನ್ನಾಳಿ ತಾಲ್ಲೂಕೊಂದನ್ನು ಬಿಟ್ಟು ಇಡೀ ಜಿಲ್ಲೆಯಾದ್ಯಂತ ರೈತರನ್ನು ಸಂಘಟಿಸುವ ಕಾರ್ಯ ಬಹುಪಾಲು ಮುಗಿದಿತ್ತು.

ಇದಕ್ಕಿಂತ ಮೊದಲು ಈ ಜಿಲ್ಲೆಯಲ್ಲಿ ರೈತರ ಹೋರಾಟ ಇರಲಿಲ್ಲವೆಂದಲ್ಲ. ಒಂದೆಡೆ ಕಬ್ಬು ಬೆಳೆಗಾಗರ ಸಂಘ ಈ ಹೋರಾಟ ನಡೆಸಿದ್ದಾರೆ. ಮತ್ತೊಂದೆಡೆ ಶಿವಮೊಗ್ಗ ಜಿಲ್ಲಾ ರೈತರ ಸಂಘ ಹೋರಾಟ ನಡೆಸಿತ್ತು. ಆದರೆ ಈ ಯಾವ ಹೋರಾಟಗಳು ಇಡೀ ಜಿಲ್ಲೆಯ ಎಲ್ಲ ರೈತರ ಸುಘಟನಾ ಶಕ್ತಿಯಾಗಿ ಹೊರ ಹೊಮ್ಮಿರಲಿಲ್ಲ. ಕಬ್ಬು ಬೆಳೆಗಾರರನ್ನು ಆಗಿನ ಮುಖ್ಯಮಂತ್ರಿ ದೇವರಾಜ ಅರಸು ನೀವು ರೈತರೇ ಅಲ್ಲ ಎಂದು ಮೂದಲಿಸಿದ್ದರು. ಉಳಿದವರ ಹೋರಾಟದ ಕೂಗು ಆಳುವವರ ಕಿವಿಯನ್ನು ಮುಟ್ಟಿಯೇ ಇರಲಿಲ್ಲ. ರೈತ ಮುಖಂಡರುಗಳ ಸಮಾಲೋಚನೆ ಮನವಿ ಪತ್ರಗಳ ಅರ್ಪಣೆ ಇತ್ಯಾದಿಗಳ ಆಚೆ ಯಾವ ರೈತ ಸಂಘವು ಏನೂ ಮಾಡಲು ಸಾಧ್ಯವಾಗಿರಲಿಲ್ಲ. ಇದೆಲ್ಲದರಿಂದ ಬೇಸರಗೊಂಡು ಒಂದು ಬಗೆಯ ಹತಾಶ ಭಾವದಲ್ಲಿದ್ದ ರೈತ ಮುಖಂಡರು ತಾವೆಲ್ಲ ಒಂದಾಗದಿದ್ದರೆ ಉಳಿಗಾಲವಿಲ್ಲ ಎಂಬುದನ್ನು ಮನಗಂಡರು. ದೊಡ್ಡ-ಸಣ್ಣ ಭೇದವನ್ನು ಮರೆತು ಜಿಲ್ಲೆಯ ಎಲ್ಲ ರೈತರೂ 'ಶಿವಮೊಗ್ಗ ಜಿಲ್ಲಾ ರೈತ ಸಂಘದ ಆಶ್ರಯದಲ್ಲಿ ಪ್ರಬಲ ಹೋರಾಟ ನಡೆಸಲು ನಿರ್ಧರಿಸಿದರು. ಈ ವೇಳೆಗಾಗಲೇ ನರಗುಂದ ನಡೆದು 'ಹೋಗಿತ್ತು.

ಹುಬ್ಬಳ್ಳಿಯಲ್ಲಿ ಆಗಸ್ಟ್ 11ರಂದು ನಡೆದ ಮಲಪ್ರಭಾ ನೀರಾವರಿ ಪ್ರದೇಶ ಸಮನ್ವಯ ಸಮಿತಿ ಹಾಗೂ ಬೆಳಗಾವಿ, ವಿಜಾಪುರ, ರಾಯಚೂರು ಮತ್ತು ಧಾರವಾಡ ಜಿಲ್ಲಾ ರೈತ ಸಂಘಟನೆಗಳ ಜಂಟೀ ಸಭೆಗೆ ಶಿವಮೊಗ್ಗ ಜಿಲ್ಲೆಯ ಪರವಾಗಿ ಶಿವಮೊಗ್ಗ ಜಿಲ್ಲಾ ರೈತ ಸಂಘದ ಅಧ್ಯಕ್ಷ ಎಚ್. ಎಸ್. ರುದ್ರಪ್ಪ ಮತ್ತು ಶಿವಮೊಗ್ಗ ಕಬ್ಬು ಬೆಳೆಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್. ಡಿ. ಸುಂದರೇಶ್ ಹಾಜರಾದರು. ನರಗುಂದದಲ್ಲಿ ನಡೆದ ಘಟನೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಭೆ, ರಾಜ್ಯಾದ್ಯಂತ ರೈತ ಹೋರಾಟವನ್ನು ವ್ಯಾಪಕವಾಗಿ ಮತ್ತು ತೀವ್ರವಾಗಿ ನಡೆಸಲು ನಿರ್ಧರಿಸಿತು. ರಾಜ್ಯದ ಎಲ್ಲರಿಗೂ ಅನ್ವಯವಾಗುವಂತೆ ಹತ್ತೊಂಭತ್ತು ಬೇಡಿಕೆಗಳನ್ನು ಸಿದ್ಧಪಡಿಸಿತು. ಜೊತೆಗೆ ಸ್ಥಳೀಯ ಬೇಡಿಕೆಗಳನ್ನೂ ಇಟ್ಟುಕೊಳ್ಳಲು ಸಭೆ ಆದೇಶ ನೀಡಿತು. ಅಲ್ಲದೆ ಆಗಸ್ಟ್ 16ರಿಂದ ರೈತ ಬೇಡಿಕೆಗಳನ್ನು ಒತ್ತಾಯಿಸಿ ರಾಜ್ಯಾದ್ಯಂತ ಸರದಿ ಉಪವಾಸ ಸತ್ಯಾಗ್ರಹವನ್ನು ನಡೆಸಬೇಕೆಂದು ನಿರ್ಣಯಿಸಲಾಯಿತು. ಹೀಗೆ ಶಿವಮೊಗ್ಗೆಯ ರೈತ ಮುಖಂಡರು ಹೋರಾಟಕ್ಕೆ ಕಂಕಣ ಬದ್ಧರಾಗಿ ಮರಳಿದರು.

ನಂತರ ಸಂಘಟನೆಯ ದೃಷ್ಟಿಯಿಂದ ಪರಿಣಾಮಕಾರೀ ಕೆಲಸಗಳು ನಡೆದವು. ಸಣ್ಣ ಪುಟ್ಟ ಅಭಿಪ್ರಾಯ ಭೇದಗಳನ್ನು ಮರೆತು ರೈತ ಮುಖಂಡರೆಲ್ಲ ಒಂದಾದರು. ಶಿವಮೊಗ್ಗ ಜಿಲ್ಲಾ ರೈತ ಸಂಘದ ಆಶ್ರಯದಲ್ಲಿ (ಕಬ್ಬು ಬೆಳೆಗಾರರ ಸಂಘದ ಹೆಸರಿನಲ್ಲಿ ಹೋರಾಟ ನಡೆದರೆ ಅದನ್ನು ಜನ ಶ್ರೀಮಂತ ರೈತರ ಹೋರಾಟ ಎಂದು ಭಾವಿಸುವರೆಂಬ ಅಳುಕಿನಿಂದ ಮತ್ತು ಸಣ್ಣ ರೈತರೆಲ್ಲ ಸಂಘಟನೆಯಿಂದ ಹೊರಗುಳಿಯಬಹುದೆಂದು ಅವ್ಯಕ್ತ ಭಯದಿಂದ ಕಬ್ಬು ಬೆಳೆಗಾರರು ಜಿಲ್ಲಾ ರೈತ ಸಂಘವನ್ನೇ ಮುಂದು ಮಾಡಿದರೆಂದೂ ಹೇಳಲಾಗುತ್ತಿದೆ) ಪಕ್ಷಾತೀತ ಸಂಘಟನೆಗೆ ರೈತ ಮುಖಂಡರು ಹಗಲಿರುಳು ದುಡಿಯಲಾರಂಭಿಸಿದರು. ರೈತ ಸಂಘಟನೆಗೆ ಬಲ ಬರದ ಹೊರತು ಸರ್ಕಾರ ಕಣ್ಣು–ಕಿವಿ ತೆರೆಯಲಾರದು ಎಂಬ ಸತ್ಯವನ್ನು ಅನುಭವದಿಂದ ಮನಗಂಡಿದ್ದ ರೈತ ಮುಖಂಡರು ಹಳ್ಳಿ ಹಳ್ಳಿಗಳನ್ನು ಸುತ್ತಿದರು.

ಆಗಸ್ಟ್ 16ರಿಂದ ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದ ಮುಂದೆ ರೈತರು ತಮ್ಮ ಹತ್ತೊಂಭತ್ತು ಬೇಡಿಕೆಗಳನ್ನಿಟ್ಟುಕೊಂಡು ಸರದಿ ಉಪವಾಸ ಸತ್ಯಾಗ್ರಹ ಆರಂಭಿಸಿದರು. 24 ತಾಸುಗಳ ಈ ಸರದಿ ಉಪವಾಸದಲ್ಲಿ ಭಾಗವಹಿಸಲು ಹಳ್ಳಿಗಳಿಂದ ರೈತ ಸಂಘಗಳು ಮುಂದಾದವು. ಒಂದೊಂದು ದಿನ ಒಂದೊಂದು ಹಳ್ಳಿ. ಪಂಚೇಂದ್ರಿಯಗಳ ಪ್ರಜ್ಞೆಯನ್ನೇ ಕಳೆದುಕೊಂಡಿದ್ದ ಸರ್ಕಾರ

'ನಿರ್ಲಿಪ್ತ'ವಾಗಿ 'ಆಡಳಿತ' ನಡೆಸುತ್ತಿತ್ತು. ರೈತರ ಉಪವಾಸ ಮುಂದುವರಿಯು ತ್ತಿತ್ತು.

ತಮ್ಮ ಸಂಘಟನೆಯ ಸಾಮರ್ಥ್ಯವನ್ನು ಮನದಟ್ಟು ಮಾಡಿಕೊಡಲು ಜಿಲ್ಲೆಯ ಎಲ್ಲ ಭಾಗಗಳಿಂದ ಬಂದ ರೈತರು ಸೆಪ್ಟೆಂಬರ್ (1980) ಒಂದರಂದು ಶಿವಮೊಗ್ಗ ದಲ್ಲಿ ಭಾರೀ ಪ್ರದರ್ಶನ ನಡೆಸಿದರು. ಆಗಲೂ ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲ. ನಾರಾಯಣಸ್ವಾಮಿ ನಾಯ್ಡು ಅವರ ಮಾತುಗಳು ಹಳ್ಳಿಹಳ್ಳಿಯಲ್ಲೂ ಮನೆ ಮಾತಾ ದವು. ಉತ್ಸಾಹದ ಬುಗ್ಗೆ ಚಿಮ್ಮಲಾರಂಭಿಸಿತು. ರೈತರು ದೇಶದ ವಿಚಾರ ಮಾತನಾಡಲಾರಂಭಿಸಿದರು. ಕೆಲವರ ಮಾತುಗಳಲ್ಲಿ 'ಲಾ ಪಾಯಿಂಟು'ಗಳೂ ಕಾಣಲಾರಂಭಿಸಿದವು. ಉಪವಾಸ ಮುಂದುವರಿದೇ ಇತ್ತು ; ಜೊತೆಗೆ ಸಂಘಟ ನೆಯ ಕಾರ್ಯವೂ.

ಸರ್ಕಾರ ಇನ್ನೂ ಕಿವಿ ತೆರೆದಿರಲಿಲ್ಲ. ಆಗ ಗಾಂಧೀ ಜಯಂತಿ ಬಂತು. ಜಿಲ್ಲಾ ಕೇಂದ್ರದಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಅಂದು ಗಾಂಧೀಜಿಯ ಭಾವ ಚಿತ್ರಕ್ಕೆ ಹಾರ ಹಾಕಿ ರೈತರು 24 ಗಂಟೆಗಳ ಸಾಮೂಹಿಕ ಉಪವಾಸ ಸತ್ಯಾಗ್ರಹ ನಡೆಸಿದರು. ಶಿವಮೊಗ್ಗದ ಜಿಲ್ಲಾಧಿಕಾರಿಗಳ ಕಛೇರಿ ಆವರಣದಲ್ಲಿ 5 ಸಾವಿರಕ್ಕೂ ಮಿಕ್ಕಿ ರೈತರು ಶಾಂತ ರೀತಿಯಿಂದ ಉಪವಾಸ ಮಾಡಿದರು. ಜಾನಪದ ವೈಭವ ದಿಂದ ಮೆರೆಯುತ್ತಿದ್ದ ಅದೇ ಆವರಣದಲ್ಲಿ – ಪಿ. ಲಂಕೇಶ್, ಪ್ರೊ. ಎಂ. ಡಿ. ನಂಜುಂಡಸ್ವಾಮಿ, ರಾಮದಾಸ್, ಮಲ್ಲೇಶ್, ಕುಂದರನಾಡ ಪಾಟೀಲ್ ಮೊದ ಲಾದವರು ಮಾತನಾಡಿ ರೈತರನ್ನು ಹುರಿದುಂಬಿಸಿದರು. ರೈತರನ್ನುದ್ದೇಶಿಸಿ ಮಾತ ನಾಡುವ ಹಂಬಲ ಹೊತ್ತಿದ್ದ ಜಾರ್ಜ್ ಫರ್ನಾಂಡಿಸ್ ಅವರಿಗೆ ಅವಕಾಶ ದೊರೆ ಯದೆ ಹೋಯಿತು. ಬತ್ತಿದ ಮುಖಗಳನ್ನು ಹೊತ್ತು ಗಾಂಧೀ ಪಟವನ್ನೇ ನೋಡುತ್ತ ರೈತರು ಕುಳಿತಿದ್ದಾಗಲೇ ಆ ದಿನದ ಸೂರ್ಯನೂ ಮುಳುಗಿ ಹೋದ. ಅಲ್ಲಿಗೆ ಮಲೆನಾಡ ರೈತರ 48 ದಿನಗಳ ಸರದಿ ಉಪವಾಸ ಸತ್ಯಾಗ್ರಹ ಮುಗಿಯಿತು ಹೋರಾಟದ ಮೊದಲ ಅಂಕಕ್ಕೆ ತೆರೆಬಿತ್ತು.

ಮಾರನೆಯ ದಿನ ಸರ್ಕಾರವನ್ನು ಬಗ್ಗಿಸಲೇ ಬೇಕು ಎಂಬ ಹಠದಿಂದ, ಗಾಂಧೀ ತತ್ವಗಳ ಮೇಲಿನ ಅಚಲ ನಂಬಿಕೆಯಿಂದ ರೈತ ಮುಖಂಡರು ಮುಂದಿನ ಘಟ್ಟದ ಹೋರಾಟಕ್ಕೆ ಸಿದ್ಧತೆ ನಡೆಸಿದರು. ಆದರೆ ರೂಪ–ರೇಷೆಗಳೇನು ಎಂಬುದನ್ನು ರಹಸ್ಯವಾಗಿಯೇ ಇಟ್ಟರು.

ಅಕ್ಟೋಬರ್ ನಾಲ್ಕು : ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕುಗಳ ಅನೇಕ ಹಳ್ಳಿಗಳಲ್ಲಿ ರೈತರ ಎರಡನೇ ಹಂತದ ಹೋರಾಟ ಕಾಣಿಸಿಕೊಂಡಿತು. ರೈತರು ಗಾಂಧೀಜಿಯವರ ಭಾವಚಿತ್ರವನ್ನು ಇರಿಸಿಕೊಂಡು ರಸ್ತೆಗಳನ್ನು ಅಡ್ಡಗಟ್ಟಿದರು. ನಮ್ಮನ್ನು ಬಂಧಿಸುವವರೆಗೆ ಈ ರಸ್ತೆಯಲ್ಲಿ ಯಾವ ವಾಹನವನ್ನೂ ಬಿಡುವುದಿಲ್ಲ ಎಂದು ಪಟ್ಟು ಹಿಡಿದು ಹತ್ತು–ಹದಿನೈದು ಜನರ ತಂಡಗಳು ಹಳ್ಳಿಹಳ್ಳಿಗಳಲ್ಲೂ ರಸ್ತೆಗಳನ್ನು ಅಡ್ಡಗಟ್ಟಿದವು. ಜೊತೆಗೆ ನಿಂತ ವಾಹನಗಳ ಮೇಲೆ ರೈತ ಚಳವಳಿಯ ಘೋಷಣೆಗಳನ್ನು ಬರೆಯುವ ಕಾರ್ಯವೂ ಆರಂಭವಾಯಿತು. ಪೋಲೀಸ್ ವಾಹನಗಳು ದಿಕ್ಕು ದಿಕ್ಕಿಗೆ ಹೊರಟವು. ' ' ' ಓ ರೈತ ಎಲ್ಲಿಗೆ, ಗುಂಡೂರಾವ್ ಜೈಲಿಗೆ ' ' ' ಎಂಬ ಘೋಷಣೆಗಳೊಂದಿಗೆ ರೈತರು ನೀಲಿ ವಾಹನಗಳನ್ನು ತುಂಬಿದರು. ಒಂದೆಡೆ ರೈತರನ್ನು ಬಂಧಿಸಿ ರಸ್ತೆ ಸಂಚಾರಕ್ಕೆ ಅವಕಾಶ ಕಲ್ಪಿಸಿದರೆ ಮತ್ತೊಂದೆಡೆ ರೈತರ ಸತ್ಯಾಗ್ರಹ. ಹಳ್ಳಿಹಳ್ಳಿಯಲ್ಲೂ ಮೊಳಗಿತು ಈ ಹಾಡು. ಪೋಲೀಸ್ ಠಾಣೆಯ ವ್ಯಾನುಗಳು ಬಿರುಸಿನಿಂದ ಓಡಾಡಿದವು. ಈ ಎರಡೂ ತಾಲ್ಲೂಕುಗಳಿಂದ ಅಂದು ಬಂಧನಕ್ಕೊಳಗಾದವರ ಸಂಖ್ಯೆ ಪೋಲೀಸ್ ವಲಯಗಳ ಪ್ರಕಾರ 240.

ಮಾರನೆಯ ದಿನದ ಹೋರಾಟ ಮತ್ತಷ್ಟು ಬಿರುಸಿನಿಂದ ನಡೆಯಿತು. ವಾಹನ ಸಂಚಾರವನ್ನು ಅಸ್ತವ್ಯಸ್ತಗೊಳಿಸುವುದು. ಮಾತ್ರವಲ್ಲ ಇಡೀ ಪಟ್ಟಣ ಪ್ರದೇಶಗಳ ಜನಜೀವನವನ್ನು ಸ್ತಬ್ಧಗೊಳಿಸಬೇಕೆಂದು ನಿರ್ಣಯಿಸಿದ್ದ ರೈತರು ಹಾಲು, ಹಣ್ಣು, ತರಕಾರಿ, ದವಸ ಧಾನ್ಯ, ಸೌದೆ ಇತ್ಯಾದಿ ಪೂರೈಕೆಯನ್ನು ನಿಲ್ಲಿಸಿದರು. ಈ ನಿಯಮ ಉಲ್ಲಂಘಿಸುವವರಿಗೆ ದಂಡ ವಿಧಿಸುವಂತೆಯೂ ಕೆಲವು ಹಳ್ಳಿಗಳಲ್ಲಿ ಸಾರಲಾಯಿತು. ಜೊತೆಗೆ ರಸ್ತೆ ಸತ್ಯಾಗ್ರಹ ಕಾರ್ಯಕ್ರಮ ಮತ್ತುಷ್ಟು ವ್ಯಾಪಕಗೊಂಡು ಹೊನ್ನಾಳಿ ತಾಲ್ಲೂಕನ್ನು ಆಕ್ರಮಿಸಿತು. ರೈತರಲ್ಲಿ ಎಲ್ಲಿಲ್ಲದ ಉತ್ಸಾಹ ಕಾಣಿಸುತ್ತಿತ್ತು.

ರೈತ ಚಳವಳಿಯ ನಿಜವಾದ ಬಿಸಿ ಈಗಾಗಲೇ ಪಟ್ಟಣ ಪ್ರದೇಶಗಳಿಗೆ ತಾಕಲಾರಂಭಿಸಿತು. ಹೋಟೇಲು–ಅಂಗಡಿಗಳಿಗೆ ಜನ ಕಡಿಮೆಯಾಗಿ, ವ್ಯಾಪಾರ ಇಳಿಮುಖವಾಗಿತ್ತು. ಮಾರುಕಟ್ಟೆಯಲ್ಲಿ ತರಕಾರಿ ಸಿಗದಾಗಿತ್ತು. ಸಿಗುವ ಕೊಳೆತ ತರಕಾರಿಯ ಬೆಲೆ ದ್ವಿಗುಣವಾಗಿತ್ತು. ಸೌದೆ ಮತ್ತಷ್ಟು ಅಭಾವ, ಹಾಲು-ಮೊಸರುಗಳು ದೊರೆಯದೆ ಹಾಲಿನ ಪುಡಿಗೆ ಶರಣು ಹೋಗಬೇಕಾದ ಅನಿವಾರ್ಯತೆ. ಬಸ್ ನಿಲ್ದಾಣಗಳು ಬಿಕೋ ಬಿಕೋ. ಮಿನಿ ನಗರಗಳು ಕಳಾಹೀನವಾಗಲಾರಂಭಿಸಿದವು.

ಈ ವೇಳೆಗಾಗಲೇ ಸರ್ಕಾರ ಕಣ್ಣು ಬಿಡಲಾರಂಭಿಸಿತ್ತು. ಅಧಿಕಾರಿಗಳು ಸರಕಾರದ ರಾಯಭಾರಕ್ಕಾಗಿ ಮಲೆನಾಡ ರೈತ ಮುಖಂಡರನ್ನು ಹುಡುಕುತ್ತ ಬಂದರು. ಅರ್ಥ ಸಚಿವ ವೀರಪ್ಪ ಮೊಯ್ಲಿ ಅವರೂ ಇದೇ ಕಾರ್ಯಕ್ಕೆ ಬಂದರು. ಇನ್ನೂ ಕೆಲವರು ಮಂತ್ರಿಗಳು, ಶಾಸಕರು, ಸಂಸತ್ ಸದಸ್ಯರು, ರಾಜಕಾರಣಿಗಳು ಒಳಗೇ ಬಂದು ಗುಟ್ಟಾಗಿ ಪರಿಸ್ಥಿತಿಯನ್ನು ಅರಿಯಲು ಶಿವಮೊಗ್ಗದಲ್ಲಿ ಬಿಡಾರ ಮಾಡಿದರು ಚಳವಳಿಯ ನಾಲಗೆಗಳು ಮಾತ್ರ ಹಳ್ಳಿಹಳ್ಳಿಗೂ ಚಾಚುತ್ತಲೇ ಇದ್ದವು.

ಅಕ್ಟೋಬರ್ ಎಂಟರವರೆಗೆ ರಸ್ತೆ ಸತ್ಯಾಗ್ರಹ ಅವ್ಯಾಹತವಾಗಿ ನಡೆಯಿತು. ರೈತರು ಸಾವಿರಾರು ಸಂಖ್ಯೆಯಲ್ಲಿ ಜೈಲುಗಳನ್ನು ತುಂಬುತ್ತಲೇ ಇದ್ದರು. ರೈತರಿಗೆ ಬರವಿರಲಿಲ್ಲ. ಜೈಲುಗಳಲ್ಲಿ ಜಾಗವಿರಲಿಲ್ಲ. ಕೇವಲ 167 ಬಂಧಿಗಳಿಗೆ ಮಾತ್ರ ಸ್ಥಳಾವಕಾಶ ಕಲ್ಪಿಸಿಕೊಡುವ ಸಾಮರ್ಥ್ಯವಿದ್ದ ಶಿವಮೊಗ್ಗದ ಜೈಲು ಎಂದೋ ತುಂಬಿ ಹೋಗಿತ್ತು. ಬಳ್ಳಾರಿ, ಬೆಳಗಾಂ, ಕಲ್ಬುರ್ಗಿ, ಕಾರವಾರ ಜೈಲುಗಳಿಗೆ ನಿತ್ಯವೂ ಸತ್ಯಾಗ್ರಹಿಗಳನ್ನು ರವಾನಿಸಲಾಗುತ್ತಿತ್ತು. ಪ್ರವಾಹದಂತೆ ಬರುವ ರೈತರಲ್ಲಿ ಯಾರನ್ನು ಬಂಧಿಸಬೇಕು ಎಂಬುದೇ ಅಧಿಕಾರಿಗಳಿಗೆ ತಲೆನೋವಾಗುತ್ತಿತ್ತು. ನೂರಾರು ಜನ ಬಂದರೆ ಹತ್ತಾರು ಜನರನ್ನು ಮಾತ್ರ ಬಂಧಿಸಿ ಪೋಲೀಸ್ ಅಧಿಕಾರಿಗಳು ಉಳಿದವರನ್ನು ಮನೆಗೆ ಹೋಗಿ ಎಂದು ಪ್ರಾರ್ಥಿಸಬೇಕಾದ ಪರಿಸ್ಥಿತಿ ಅನೇಕ ಕಡೆ ಉಂಟಾಗಿತ್ತು. ಜೈಲಿಗೆ ಹೋಗುವುದನ್ನು ಒಂದು ಗೌರವದ ಪ್ರಶ್ನೆ ಎಂದು ಬಗೆದಿದ್ದ ರೈತರು ನಾನು ಮುಂದು ತಾನು ಮುಂದು ಎಂದು ಬರುತ್ತಲೇ ಇದ್ದರು.

ವಾಹನಗಳನ್ನು ಗಂಟೆಗಟ್ಟಲೆ ತಡೆಯಲಾಗುತ್ತಿತ್ತು. ಪೋಲೀಸರು ಬಂದು ಸತ್ಯಾಗ್ರಹಿಗಳನ್ನು ಬಂಧಿಸುವವರೆಗೆ ರಸ್ತೆ ತೆರವಾಗುತ್ತಿರಲಿಲ್ಲ. ಪೋಲೀಸರು ಬರಲು ಗಂಟೆಗಳೇ ಬೇಕಾಗುತ್ತಿದ್ದುದರಿಂದ (ಯಾಕೆಂದರೆ ಎಲ್ಲ ಕಡೆಗಳಲ್ಲೂ ಸತ್ಯಾಗ್ರಹ) ವಾಹನಗಳು ಅಷ್ಟು ಹೊತ್ತಿನವರೆಗೆ ಕಾಯಬೇಕಾಗುತ್ತಿತ್ತು. ಒಂದು ಹಳ್ಳಿಯಿಂದ ಹೊರಟರೆ ಮತ್ತೊಂದು ಹಳ್ಳಿಯಲ್ಲಿ ತಡೆ. ಶಿವಮೊಗ್ಗ ಜಿಲ್ಲೆಯನ್ನು ದಾಟುವುದೇ ದುಸ್ಸಾಹಸವಾಗುತ್ತಿತ್ತು. ಆದರೆ ಎಲ್ಲಿಯೂ ಹಿಂಸಾಕೃತ್ಯಗಳು ನಡೆಯಲಿಲ್ಲ. ವಾಹನಗಳ ಗಾಜು ಪುಡಿಯಾಗಲಿಲ್ಲ. ಬಸ್ಸು ಓಡಿಸುವುದು ಅಸಾಧ್ಯ ಎನಿಸಿ ಜಿಲ್ಲೆಯಲ್ಲಿ ಖಾಸಗೀ ಬಸ್ಸುಗಳ ಮಾಲೀಕರು ಅಕ್ಟೋಬರ್ 7ರಂದು ವಾಹನಗಳನ್ನು ನಿಲ್ಲಿಸಿದರು. ಸರ್ಕಾರಿ ಬಸ್ಸುಗಳ ಓಡಾಟವೂ ರದ್ದಾಯಿತು. ವಾಹನಗಳಿಲ್ಲದೆ ಪಟ್ಟಣ ಪ್ರದೇಶಗಳ ಜೀವನ ಅಸ್ತವ್ಯಸ್ತಗೊಂಡಿತು. ಜೈಲುಗಳನ್ನು ತುಂಬಲು ಹೊರಟ ರೈತರಿಗೆ ಈಗ ಹೊಸ ಸಮಸ್ಯೆ ಕಾಣಿಸಿಕೊಂಡಿತು. ದಿನಗಟ್ಟಲೆ

ಕಾದು ಕುಳಿತರೂ ಒಂದೂ ವಾಹನವಿಲ್ಲ. ಪೋಲೀಸರೂ ಬಂಧಿಸಲು ಬರುತ್ತಿಲ್ಲ. ಶಿವಮೊಗ್ಗೆಯ ಸುತ್ತಮುತ್ತಲಿನ ಹಳ್ಳಿಯ ರೈತರು ಹಸಿರು ಟೋಪಿ–ವಸ್ತ್ರಗಳನ್ನು ತೊಟ್ಟುಕೊಂಡು ನೂರಾರು ಸಂಖ್ಯೆಯಲ್ಲಿ ಶಿವಮೊಗ್ಗಕ್ಕೆ ಬಂದು ಗೋಪಿ ಸರ್ಕಲ್ ಸುತ್ತಲಾರಂಭಿಸಿದರು. ಕೈಕೈಹಿಡಿದು ವೃತ್ತ ರಚಿಸಿ ಸರ್ಕಲ್ಲಿಗೆ ಮುತ್ತಿಗೆ ಹಾಕಿ ವಾಹನಗಳ ಮತ್ತು ಜನರ ಸಂಚಾರ ತಡೆದು ತಮ್ಮನ್ನು ಬಂಧಿಸಲು ಒತ್ತಾಯಪಡಿಸಲಾರಂಭಿಸಿದರು.

ಇದು ಒಂದು ಚಿತ್ರವಾದರೆ, ಮತ್ತೊಂದು ಜೈಲುಗಳದು. ಇಲ್ಲಲೂ ಜಾಗವಿಲ್ಲದಷ್ಟು ಜನ. ಜೊತೆಗೆ ಊಟದ ವ್ಯವಸ್ಥೆ, ಎಲ್ಲವೂ ಅವ್ಯವಸ್ಥೆ. ಜೈಲು ಸಿಬ್ಬಂದಿಯ ಸಂಖ್ಯೆ ಅತಿ ಕಡಿಮೆ. ಬಂಧಿತರಾದವರಿಂದ ವಿವರಗಳನ್ನು ಪಡೆದು ದಾಖಲೆ ಮಾಡಿಕೊಂಡು ಬೇರೆ ಬೇರೆ ಜೈಲುಗಳಿಗೆ ರವಾನಿಸುವ ಕಾರ್ಯ. ಸರ್ಕಾರ ಇಲ್ಲಿಗೆ ತಾತ್ಕಾಲಿಕವಾಗಿಯಾದರೂ ಹೆಚ್ಚು ಸಿಬ್ಬಂದಿಯನ್ನು ಹಾಕಬೇಕಿತ್ತು. ಅದಾಗಲಿಲ್ಲ. ಇದ್ದವರೇ ಹಗಲೂ ರಾತ್ರಿ ದುಡಿದರು, ಸಿಟ್ಟಿಗೆದ್ದರು, ಬೇಜಾರು ಮಾಡಿಕೊಂಡರು. ದಣಿದ ದೇಹ ಹೊತ್ತು ಗೊಣಗುತ್ತ, ಸರ್ಕಾರವನ್ನು ಬೈಯುತ್ತ ದುಡಿದೇ ದುಡಿದರು. ಆದರೂ ಜೈಲಿನ ಮುಂದೆ ನಿಂತ ಬಂಧಿಗಳ ಸಂಖ್ಯೆ ಕಡಿಮೆಯಾಗಲಿಲ್ಲ. ತಮ್ಮ ಸರದಿಗಾಗಿ ಕಾದರು. ಕಾದು ಸತ್ಯಾಗ್ರಹಿಗಳಿಗೂ ಸಹನೆ ಮೀರಿತ್ತು. ಕೆಲವರು ಬೈದಾಡಿದರು. ಕೆಲವರು ಬೀಡಿ ಸೇದಿ ಹೊಗೆ ಬಿಟ್ಟರು. ಬೇಸರದಿಂದ ಯಾರಾದರೂ ಹಿಂದಕ್ಕೆ ಹೋಗಬಹುದೇನೋ ಎಂದು ಪೋಲೀಸರು ಓರೆಗಣ್ಣಲ್ಲೇ ನೋಡಿದರು. ಯಾರೂ ಹೋಗದೆ ನಿರಾಶರಾದರು. ಹೊಟ್ಟೆ ಹಸಿದು ಚುರುಗುಟ್ಟಿದರೂ, ಮಧ್ಯರಾತ್ರಿಯ ತಣ್ಣನೆಯ ಗಾಳಿ ತೀಡಿ ದೇಹ ನಡುಗಿದರೂ ಯಾರೂ ಜೈಲಿನ ಆವರಣ ಬಿಟ್ಟು ಕದಲಲಿಲ್ಲ. ಅದು ನಿಜವಾದ ಅರ್ಥದಲ್ಲಿ ಸತ್ಯಾಗ್ರಹವಾಗಿತ್ತು. ಗಾಂಧೀಜಿಯವರ ಮೌಲ್ಯಗಳಿಗೆ ಹೊಸ ಅರ್ಥ ತಂದುಕೊಟ್ಟಿತ್ತು.

ಪರಿಸ್ಥಿತಿಯನ್ನು ಪೂರ್ಣ ನಿಯಂತ್ರದಲ್ಲಿರಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ ಎಂದೆನಿಸಿದ ರೈತ ಮುಖಂಡರು ಅಕ್ಟೋಬರ್ ಎಂಟರಂದು ತುರ್ತುಸಭೆ ನಡೆಸಿದರು. ಚಳವಳಿಯನ್ನು ಯಾವ ದಿಕ್ಕಿನಲ್ಲಿ ಕೊಂಡೊಯ್ಯಬೇಕು ಎಂಬ ಬಗ್ಗೆ ಸುದೀರ್ಘ ಚರ್ಚೆ ನಡೆಸಿದರು. ರಸ್ತೆ ಸತ್ಯಾಗ್ರಹವನ್ನು ನಿಲ್ಲಿಸಿ ಅಕ್ಟೋಬರ್ 10 ರಿಂದ ಚಳವಳಿಗೆ "ಹೊಸ ತಿರುವನ್ನು ಕೊಡುತ್ತಿದ್ದೇವೆ" ಎಂದು ಘೋಷಿಸಿದರು. ಮುಖಂಡರ ಈ ತೀರ್ಮಾನ ಮಾರನೆಯ ದಿನ ಹಳ್ಳಿಹಳ್ಳಿಗೂ ಹೋಯಿತು.

"ಸರ್ಕಾರದ ಆಡಳಿತ ಯಂತ್ರಕ್ಕೆ ನೇರವಾಗಿ ಬಿಸಿ ಮುಟ್ಟಿಸುವ" ಈ ಹೊಸ ಬಗೆಯ ಕಾರ್ಯಕ್ರಮ ರಾಜ್ಯ ಸರ್ಕಾರದ ಎಲ್ಲ ಕಛೇರಿಗಳಿಗೂ "ಮುತ್ತಿಗೆ ಹಾಕು ವವರ" ಮೂಲಕ ಆರಂಭವಾಯಿತು. ಮೊದಲ ದಿನ ಯಾವ ಸರ್ಕಾರಿ ಕಚೇರಿ ಯಲ್ಲಿಯೂ ಮಗ್ಗಾಣಿಯ ಕೆಲಸವೂ ನಡೆಯಲಿಲ್ಲ. ರೈತರ ಅಪಾರ ಸಂಖ್ಯೆಯನ್ನು ಗಮನಿಸಿ ಕೆಲವರು, ರೈತರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಕೆಲವರು, ರಜಾ ಸಿಕ್ಕಿತಲ್ಲಾ, ಎಂಬ ಖುಷಿಯಲ್ಲಿ ಕೆಲವರು ತಮ್ಮ ತಮ್ಮ ಕಚೇರಿಗಳಿಂದ ಹೊರಬಂದರು. ರೈತರನ್ನು ನಮ್ಮ ಕಚೇರಿಯ ಕಡೆ ಕಳುಹಿಸಿಕೊಡಿ. ಬೇಗ, ಸಿನಿಮಾಕ್ಕೆ ಹೋಗ ಬೇಕು ಎಂದವರೂ ಇದ್ದರು. ಅಂತೂ ಕಚೇರಿಗಳ ಪಿಕೆಟಿಂಗ್ ಕಾರ್ಯಕ್ರಮ ಯಶಸ್ವಿ ಯಾಯಿತು. ಎರಡನೆಯ ದಿನಕ್ಕೂ ಈ ಕಾರ್ಯಕ್ರಮ ಮುಂದುವರಿಯಿತು. ಜಿಲ್ಲೆಯಾದ್ಯಂತ ಸರ್ಕಾರಿ ಆಡಳಿತ ಯಂತ್ರ ಸ್ತಬ್ಧಗೊಂಡಿತು.

ಮೇಲಿಂದ ಮೇಲೆ ಸರ್ಕಾರದ "ರಾಯಭಾರಿ"ಗಳು ಬರುತ್ತಲೇ ಇದ್ದರು. ಮಂತ್ರಿಗಳಂತೂ (ಕೆಲವರು ಅನಧಿಕೃತವಾಗಿ) ಬೀಡು ಬಿಟ್ಟಿದ್ದರು. ಸ್ಥಳೀಯ ಅಧಿ ಕಾರಿಗಳಂತೂ ಸರ್ಕಾರದ ಕೆಲಸವನ್ನು "ತ್ರಿಕರಣ ಪೂರ್ವಕವಾಗಿ" ಮಾಡುತ್ತಲೇ ಇದ್ದರು. ಸರ್ಕಾರ ತಲ್ಲಣಗೊಂಡಿತ್ತು. ಅನೇಕ ಜಿಲ್ಲೆಗಳ ರೈತ ಮುಖಂಡರು ಶಿವಮೊಗ್ಗಕ್ಕೆ ಧಾವಿಸಿ ಮುಖಂಡರೊಡನೆ ಮಾತುಕತೆ ನಡೆಸಿ ತಮ್ಮ ಜಿಲ್ಲೆಗಳಲ್ಲೂ ಚಳವಳಿ ಆರಂಭಿಸಲು ಸನ್ನಾಹ ನಡೆಸಿದ್ದರು. ಶಾಂತ ರೀತಿಯಲ್ಲಿದ್ದ ಇಡೀ ರಾಜ್ಯದ ಗಮನ ಸೆಳೆದು ಸರ್ಕಾರವನ್ನು ನಡುಗಿಸಿ ಬಿಟ್ಟಿದ್ದ ಮಲೆನಾಡ ರೈತ ಸತ್ಯಾಗ್ರಹಿಗಳು ಅತಿ ಪ್ರಾಮುಖ್ಯ ಗಳಿಸಿದ್ದರು. ಉಳಿದ ಜಿಲ್ಲೆಗಳಿಗೆ ಮಾದರಿಯಾಗಿದ್ದರು. ಸರ್ಕಾರ ಇನ್ನೇನು ಬಗ್ಗಿತು, ರೈತ ಗೆದ್ದ ಎನ್ನುವ ಮಾತುಗಳೂ ಕೇಳಿ ಬರುತ್ತಿದ್ದವು ಈ ಮಧ್ಯೆ ಕೆಲವು ಘಟನೆಗಳು ನಡೆದು ಹೋದವು.

ಭದ್ರಾವತಿಯಲ್ಲಿ ಮತೀಯ ಗಲಭೆ ನಡೆದು "ಶಾಂತಿ ಮತ್ತು ಕಾನೂನು" ಹದಗೆಟ್ಟಿತ್ತು. ಶಿವಮೊಗ್ಗೆಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸಿಬ್ಬಂದಿ ರೈತರು ಮತ್ತು ವಿದ್ಯಾರ್ಥಿಗಳೊಂದಿಗೆ ಹಣಾಹಣಿ ನಡೆಸಿ, ಶಾಂತಿ ಕಲಕಿತ್ತು. ಯಾರಿಗೂ ದೊಡ್ಡ ಅಪಾಯ ಸಂಭವಿಸದೇ ಹೋದರೂ ಶಿವಮೊಗ್ಗೆಯ ಗಲಭೆಯಲ್ಲಿ ಹೊಡೆ ದಾಟ, ಬಡಿದಾಟ, ಮಾರಾಮಾರಿ, ಕಲ್ಲು ತೂರಾಟ, ಬಡಿಗೆ ಕಬ್ಬಿಣದ ರಾಡು-ಲಿವರ್‌ಗಳ ಬಳಕೆ ನಡೆದಿತ್ತು, ನಾಗರಿಕರು ತಲ್ಲಣಗೊಂಡಿದ್ದರು. ಜಿಲ್ಲಾಧಿಕಾರಿ ಡಾ. ಟಿ. ತಿಮ್ಮಯ್ಯ ಸೆಕ್ಷನ್ 144ರ ಪ್ರಕಾರ ಒಂದು ವಾರ ಈ ಎರಡು ನಗರಗಳಲ್ಲಿ ನಿಷೇಧಾಜ್ಞೆ ಜಾರಿಗೆ ತಂದಿದ್ದರು.

ಪರಿಸ್ಥಿತಿ ಗಂಭೀರವಾಗಿದೆ ಎಂದು ರೈತ ಮುಖಂಡರು ಮತ್ತೆ ಅ. 11 ರಂದು ತುರ್ತು ಸಭೆ ನಡೆಸಿ, ಸುಧೀರ್ಘವಾಗಿ ಚರ್ಚಿಸಿದರು. ಅಕ್ಟೋಬರ್ 12 ರಿಂದ ತಮ್ಮ ಹೋರಾಟವನ್ನು "ತಾತ್ಕಾಲಿಕವಾಗಿ" ನಿಲ್ಲಿಸುವ ನಿರ್ಧಾರವನ್ನು ಮಾಡಿದರು. "ಶಿವಮೊಗ್ಗ ಮತ್ತು ಭದ್ರಾವತಿಯಲ್ಲಿ ಪರಿಸ್ಥಿತಿ ಪ್ರಕ್ಷುಬ್ಧಗೊಂಡಿರುವ" ಹಾಗೂ ಜೈಲುಗಳಲ್ಲಿರುವ ರೈತ ಚಳವಳಿಕಾರರ ಬಗ್ಗೆ ಸರ್ಕಾರ ತುಂಬ ಉದಾಸೀನ ಧೋರಣೆ ತಳೆದಿದ್ದು ಅವರಿಗೆ ಊಟ ವಸತಿಗಳು ದೊರೆಯದಿರುವ " ಕಾರಣಗಳನ್ನು ಈ ರೈತ ಮುಖಂಡರು ತಮ್ಮ ನಿರ್ಧಾರಕ್ಕೆ ಸಮರ್ಥನೆಯಾಗಿ ನೀಡಿದರು. ಅಲ್ಲದೆ "ಇದು ಚಳವಳಿಯ ಪೂರ್ಣ ನಿಲುಗಡೆಯಲ್ಲ, ತಾತ್ಕಾಲಿಕ ತಡೆ ಮಾತ್ರ. ಯಾವ ಕಾರಣಕ್ಕೂ ನಾವು ಹೋರಾಟದ ಕಣದಿಂದ ಒಂದು ಹೆಜ್ಜೆಯೂ ಹಿಂದೆ ಸರಿಯುವುದಿಲ್ಲ" ಎಂದು ಘೋಷಿಸಿಕೊಂಡರು.

ಅಂತೂ ತಾತ್ಕಾಲಿಕವಾಗಿಯಾದರೂ ರೈತರ ಹೋರಾಟಕ್ಕೆ ತೆರೆಬಿತ್ತು. ಸರ್ಕಾರ ಸಮಾಧಾನದ ನಿಟ್ಟುಸಿರು ಬಿಟ್ಟಿತು. ಉತ್ಸಾಹದಲ್ಲಿದ್ದ ರೈತರು ತಮ್ಮ ಮುಖಂಡರ ಈ ನಿರ್ಧಾರದಿಂದ ಗೊಣಗುತ್ತ ಸತ್ಯಾಗ್ರಹ ನಿಲ್ಲಿಸಿದರು. ಶಿಕಾರಿಪುರ ದಲ್ಲಿ ಭಾರತೀಯ ಜನತಾ ಪಕ್ಷದ ತಾಲ್ಲೂಕು ಅಧ್ಯಕ್ಷ ಬಿ. ಎಸ್. ಎಡೆಯೂರಪ್ಪ ಅವರು "ಈ ನಿರ್ಧಾರ ಸರಿಯಾದುದಲ್ಲ" ಎಂದು ತಿಳಿಸಿ ತಾವು ಪಿಕೆಟಿಂಗ್ ಕಾರ್ಯ ಕ್ರಮ ಮುಂದುವರಿಸುವುದಾಗಿ ಘೋಷಿಸಿದರು. ಕೆಲವು ತಾಲ್ಲೂಕುಗಳ ಮುಖಂಡ ರನ್ನೂ ಭೇಟಿ ಮಾಡಿದ್ದೇನೆ. ಜಿಲ್ಲೆಯಾದ್ಯಂತ ಈ ಕಾರ್ಯಕ್ರಮ ಮುಂದುವರಿಸು ವುದಾಗಿ ಘೋಷಿಸಿದರು. ಕೆಲವು ತಾಲ್ಲೂಕುಗಳ ಮುಖಂಡರನ್ನೂ ಭೇಟಿ ಮಾಡಿ ದ್ದೇನೆ. ಜಿಲ್ಲೆಯಾದ್ಯಂತ ಈ ಕಾರ್ಯಕ್ರಮ ಮುಂದುವರಿಸುತ್ತೇನೆ ಎಂದೂ ಅವರು ಹೇಳಿಕೊಂಡರು. ಜಿಲ್ಲೆಯಲ್ಲೆಲ್ಲ ಚಳವಳಿ ನಿಂತ ಮಾರನೆಯ ದಿನ ಶಿಕಾರಿಪುರದಲ್ಲಿ ಎಡೆಯೂರಪ್ಪ ಕಚೇರಿ ಪಿಕೆಟಿಂಗ್ ನಡೆಸಿದರು. 115 ಜನರ ಗುಂಪೊಂದನ್ನು ಪೋಲೀಸರು ಬಂಧಿಸಿದರು. (ಎಡೆಯೂರಪ್ಪ ರೈತ ಸಮಿತಿಯಲ್ಲಿಲ್ಲ, ಆತ ರಾಜಕೀಯ ಪಕ್ಷದ ಸಕ್ರಿಯ ಕಾರ್ಯಕರ್ತ. ಅವರು ನಡೆಸುವ ಹೋರಾಟಕ್ಕೂ ನಮ್ಮ ರೈತ ಚಳವಳಿಗೆ ಸಂಬಂಧವಿಲ್ಲ ಎಂದು ಜಿಲ್ಲೆಯ ರೈತ ಮುಖಂಡರು ಹೇಳಿಕೊಂಡರು. ಜೊತೆಗೆ ಶಿಕಾರಿಪುರದ ರೈತ ಕ್ರಿಯಾ ಸಮಿತಿಯ ಬೆಂಬಲವೂ ಎಡೆಯೂರಪ್ಪ ಅವರಿಗೆ ಸಿಕ್ಕಲಿಲ್ಲ. ಈ ಸಮಿತಿಯಲ್ಲಿದ್ದ ಒಬ್ಬ ಬಿ. ಜೆ. ಪಿ. ಕಾರ್ಯಕರ್ತರ ಬೆಂಬಲವೂ ಅವರಿಗೆ ದೊರೆಯಲಿಲ್ಲ. ಅವರ ಚಳವಳಿಯೂ ಮುಂದುವರೆಯಲಿಲ್ಲ).

ಈ ಹೋರಾಟ ಜಿಲ್ಲೆಯಾದ್ಯಂತ ಸುಮಾರು ಹತ್ತು ಸಾವಿರ ಸತ್ಯಾಗ್ರಹಿಗಳನ್ನು ಜೈಲಿಗೆ ಕಳುಹಿಸಿತ್ತು.

ಚಳವಳಿ ನಿಂತ ದಿನವೇ (ಅಕ್ಟೋಬರ್ 12) "ರೈತ ಮುಖಂಡರು ಕರೆದ ಪತ್ರಿಕಾ ಗೋಷ್ಠಿಯಲ್ಲಿ ವಿನೀತಭಾವ ಪ್ರಕಟಿಸಿದರು. "ನಮಗೆ ಯಾರ ವಿರುದ್ಧವೂ ಕೋಪವಿಲ್ಲ" ಎಂಬ ಸಾತ್ವಿಕ ತೇಜಸ್ಸನ್ನೇ ಮೆರೆಸಿದರು, "ರೈತರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ನಡೆಸಿದರೆ ಚಳವಳಿ ನಿಲ್ಲಿಸುವ ಬಗ್ಗೆ ಪರಿಶೀಲಿಸಬಹುದೆಂಬ" ಮಾತುಗಳನ್ನಾಡಿದರು. ಅಕ್ಟೋಬರ್ 17ರಂದು ಮುಖ್ಯ ಮಂತ್ರಿಗಳೊಂದಿಗೆ ರೈತ ಸಮನ್ವಯ ಸಮಿತಿ ಮಾತುಕತೆ ನಡೆಸಲಿರುವುದನ್ನು ಪ್ರಕಟಿಸಿದ ಈ ರೈತ ಮುಖಂಡರು, "ಮಾತುಕತೆ ಸಮಯದಲ್ಲಿ ಮುಖ್ಯಮಂತ್ರಿಗಳ ಜೊತೆ ಸರ್ಕಾರಿ ಆಡಳಿತ ಯಂತ್ರವೂ ಇರಬೇಕಾಗುತ್ತದೆ. ಹೀಗಾಗಿ ನಾವೇ (ರೈತರು) ಬೆಂಗಳೂರಿಗೆ ಹೋಗುತ್ತೇವೆ" ಎಂಬ ಕಾರಣವನ್ನೂ ನೀಡಿದರು.

ಎಲ್ಲರೂ ಕಾತರದಿಂದ ನೋಡಿದ ಅಕ್ಟೋಬರ್ 17 ಬಂದೇ ಬಂತು. ಹಸಿರು ಮುಂಡಾಸು ಕಟ್ಟಿದ ಮುಖಂಡರೊಂದಿಗೆ ಮುಖ್ಯಮಂತ್ರಿಗಳು " ಬಿಚ್ಚು ಮನಸ್ಸಿನ ಚರ್ಚೆ" ನಡೆಸಿದ ನಂತರ ಮಂತ್ರಿ ಮಂಡಲದ ತುರ್ತುಸಭೆ 19 ಬೇಡಿಕೆಗಳಲ್ಲಿ 11 ಬೇಡಿಕೆಗಳಿಗೆ ತನ್ನ ಒಪ್ಪಿಗೆ ನೀಡಿತು. ಉಳಿದ ಬೇಡಿಕೆಗಳ ಚರ್ಚೆಯನ್ನು ಮಾರನೆಯ ದಿನಕ್ಕಿಟ್ಟುಕೊಂಡಿತು. ಇದರಿಂದ ರೈತ ಚಳವಳಿ ಅಂತ್ಯವಾಯಿತು; ಎಂದೇ ಎಲ್ಲರೂ ಎಣಿಸಿದರು.

ಆದರೆ ಆದದ್ದೇ ಬೇರೆ. ನಮ್ಮ ಬೇಡಿಕೆಗಳನ್ನೆಲ್ಲ ಸರ್ಕಾರ "ವಿರೂಪ" ಗೊಳಿಸಿದೆ. ಇದರಿಂದ ಯಾರಿಗೂ ಲಾಭವಿಲ್ಲ. ಹೋರಾಟ ಮುಂದುವರಿಯುತ್ತದೆ ಎಂದು ಜೋಲು ಮುಖ ಹಾಕಿಕೊಂಡು ವಾಪಸಾದ ರೈತ ಮುಖಂಡರು ಸಾರಿದರು. ಈ ಮಾತುಗಳಿಗೆ ಸರ್ಕಾರ ಗಮನ ಕೊಡಲೇ ಇಲ್ಲ.

ಅಕ್ಟೋಬರ್ 15, ಮುಖ್ಯ ಮಂತ್ರಿಗಳೊಂದಿಗೆ ಮಾತುಕತೆಗೆ ಸಿದ್ಧವಾಗುತ್ತಿದ್ದ ರೈತ ಮುಖಂಡರು ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದರು. "ಮಾತುಕತೆ ವಿಫಲವಾದರೆ ಹೋರಾಟ ಉಗ್ರವಾಗುತ್ತದೆ. ಸರ್ಕಾರ ಹೆದರಲಿ ಎಂದು ಈ ಮಾತು ಹೇಳುತ್ತಿಲ್ಲ. ಕರ್ನಾಟಕವನ್ನೇ ದೊಡ್ಡ ಜೈಲು ಮಾಡುತ್ತೇವೆ. ಹೋರಾಟದ ತಂತ್ರಗಳು ಬದಲಾಗುತ್ತದೆ........"

ಮಾತುಕತೆ ವಿಫಲವಾಯ್ತು ನಿಜ. ಆದರೆ ಹೋರಾಟ ಉಗ್ರವಾಗಲಿಲ್ಲ. ಕರ್ನಾಟಕ ಮತ್ತೆ ಜೈಲಾಗಲಿಲ್ಲ.

ಮುಂದುವರಿದ ಮಾತುಗಳನ್ನು ಮುಖಂಡರು ಆಡಿದರಾದರೂ ಪರಿಣಾಮ ದಲ್ಲಿ ಅದು ಕಂಡುಬರಲಿಲ್ಲ. ಕರನಿರಾಕರಣೆಯು ತಣ್ಣನೆಯ ಚಳವಳಿ ಶಿವಮೊಗ್ಗ-ಭದ್ರಾವತಿ ತಾಲ್ಲೂಕುಗಳ ಕೆಲವು ಹಳ್ಳಿಗಳಲ್ಲಿ ಮಾತ್ರ ನಡೆಯಿತು. ಮೊದಲಿನ ಬಿರುಸಾಗಲೀ ಉಮೇದಾಗಲಿ ರೈತರಲ್ಲಿ ಕಂಡುಬರಲಿಲ್ಲ. ಸರ್ಕಾರಕ್ಕೂ ಬಿಸಿ ಮುಟ್ಟಲಿಲ್ಲ. ಎಲ್ಲರ ಗಮನ ಸೆಳೆದು; ಸರ್ಕಾರವನ್ನು ನಡುಗಿಸಿ 'ಹೀರೋ' ಆಗಿದ್ದ ಮಲೆನಾಡ ರೈತ ಹಾಗೆಯೇ ಮರೆಯಾದ.

ಇದೆಲ್ಲ ನಡೆಯುವಾಗಲೇ ಸರ್ಕಾರ ಮತ್ತೆ ಕ್ರೂರವಾಯಿತು. ನರಗುಂದ-ನವಲಗುಂದ ಘಟನೆಯಲ್ಲಿ ಬಂಧನಕ್ಕೊಳಗಾದ ರೈತರ ಮೇಲೆ ಬಿಗಿ ಕ್ರಮ ಕೈಗೊಳ್ಳುವ ಸನ್ನಾಹ ನಡೆಸಿತು. "ಬೇಷರತ್ತಾಗಿ ಎಲ್ಲ ರೈತ ಬಂಧಿತರನ್ನು ಬಿಡುಗಡೆ ಮಾಡುವುದಾಗಿ ಸಾರಿದ ಸರ್ಕಾರ ಮಾತಿಗೆ ತಪ್ಪಿತು, 19 ಬೇಡಿಕೆಗಳನ್ನು ವಿರೂಪ ಗೊಳಿಸಿತು" ಎಂದು ಹೇಳುತ್ತ ರಾಜ್ಯ ರೈತ ಸಮನ್ವಯ ಸಮಿತಿ ಶಿವಮೊಗ್ಗೆಯಲ್ಲಿ ನವೆಂಬರ್ 23 ರಂದು ಸಭೆ ಸೇರಿ ಬಂಧಿಗಳ ಬಿಡುಗಡೆ ಬಗ್ಗೆ ಗಂಭೀರ ಚರ್ಚೆ ನಡೆಸಿತು. ನೀತಿ ಎಂಥದು. ಲಾಲಸೆಗಳು, ಅಧಿಕಾರ ಗದ್ದುಗೆಯ ಪ್ರೀತಿ ಎಷ್ಟು ಉತ್ಕಟವಾದವು. ಹೊರಗಿನ ನಯಗಾರಿಕೆಯ ಮಾತುಗಳು ಎಂ[illegible] ಮೋಸದವು ಎಂಬುದು ಮನವಟ್ಟಾಗಿತ್ತು. ಕಟುವಾಗದ ಹೊರತು ಅನ್ಯಮಾರ್ಗ ವಿಲ್ಲ ಎಂದುಕೊಂಡ ರೈತರು ಡಿಸೆಂಬರ್ 21ರಂದು ರಾಜ್ಯಾದ್ಯಂತ ಕರಾಳದಿ[illegible] ಆಚರಿಸಲು ನಿರ್ಧರಿಸಿದರು. ಹತ್ತೊಂಬತ್ತು ಬೇಡಿಕೆಗಳನ್ನು ಒತ್ತಾಯಿಸುವುದ ಇದರ ಉದ್ದೇಶವಾದರೂ ಮುಖ್ಯ ಗುರಿ ನರಗುಂದ ರೈತ ಸತ್ಯಾಗ್ರಹಿಗಳನ್ನು ತಕ್ಷ[illegible] ವಿಮೋಚನೆ ಮಾಡಿಸುವುದಾಗಿತ್ತು. ಅದಕ್ಕಾಗಿಯೇ ಡಿಸೆಂಬರ್ 22 ರಿಂದ ಕಚೇ[illegible] ಗಳ ಮುಂದೆ ಪಿಕೆಟಿಂಗ್ ನಡೆಸಲು ತೀರ್ಮಾನವಾಯಿತು.

ಈಗ ಎಲ್ಲವೂ ಶಾಂತವಾಗಿದೆ. ಒಂದು ಕಡೆ ಒಳಗೇ ಕುದಿಯುವ ಅಸ[illegible] ಯಕ ರೈತರು. ಮತ್ತೊಂದು ಕಡೆ ಮೋಸದ ದೇಶಾವರಿ ನಗೆ ಬೀರುವ ಸರ್ಕಾ[illegible] ಹಣ್ಣಾದ ಭತ್ತದ ಕೊಯ್ಲು ಕಾರ್ಯವೂ ಈಗ ನಡೆಯುತ್ತಿದೆ. ಜೊತೆಗೇ ಅ[illegible] ಭಾಷಣಗಳೂ, ರೈತ ಮುಖಂಡರು ಊರೂರು ಸುತ್ತಿ ವಿಚಾರ ವಿನಿಮಯ ನ[illegible] ತ್ತಿದ್ದಾರೆ. ಮುಂದೇನು ?

ಚಳವಳಿಯ ದಿನಚರಿ

ಮಲೆನಾಡ ರೈತರ ಹೋರಾಟ ಒಂದು ರೋಮಾಂಚಕ ಅನುಭವ. ರಣ ರಂಗಕ್ಕೆ ಹೊರಟ ವೀರರಂತೆ ಜೈಲಿಗೆ ಹೊರಟ ರೈತರು, ಅವರ ಉತ್ಸಾಹ, ನೋವು-ನಲಿವು ಎಲ್ಲವೂ ಸ್ಮರಣೀಯ. ದಿನದಿನಕ್ಕೂ ಶಿವಮೊಗ್ಗ ಜಿಲ್ಲೆ ಯಾವ ಸ್ವರೂಪ ಪಡೆದು ಕೊಳ್ಳುತ್ತಿತ್ತು ಎಂಬುದರ ಸ್ಪಷ್ಟ ಚಿತ್ರ ಮೂಡಬೇಕಾದರೆ ಚಳವಳಿಯ ದಿನಚರಿಯನ್ನು ನೋಡಬೇಕು. ನಿಖರ ಸುದ್ದಿಗಳನ್ನು ನೀಡಿದ 'ಪ್ರಜಾವಾಣಿ'ಯ ವರದಿಗಳನ್ನು ಇಲ್ಲಿ ಹಾಗೆಯೇ ಬಳಸಿಕೊಳ್ಳಲಾಗಿದೆ.

ಅಕ್ಟೋಬರ್ 4

ಮಲೆನಾಡು ರೈತರಿಂದ ಕಾಯ್ದೆಭಂಗ ಚಳವಳಿ : ಶಿವಮೊಗ್ಗ, ಅ.4- "ಓ ರೈತ ಎಲ್ಲಿಗೆ...ಎಲ್ಲಿಗೆ—ಜೈಲಿಗೆ....ಜೈಲಿಗೆ" ಎನ್ನುವ ಘೋಷದೊಡನೆ ಶಾಂತ ರೀತಿಯಲ್ಲಿ ಜೈಲು ತುಂಬುವ ಕಾರ್ಯಕ್ರಮಕ್ಕೆ ಇಂದು ಬೆಳಿಗ್ಗೆ ನಾಂದಿ ಹಾಡಿದ ಶಿವಮೊಗ್ಗ ಜಿಲ್ಲಾ ರೈತರು ಅಹಿಂಸಾತ್ಮಕ ಹೋರಾಟಕ್ಕೆ ಹೊಸ ತಿರುವು ನೀಡಿದರು.

ಗಾಂಧೀಜಿ ಅವರ ಭಾವಚಿತ್ರ ಇರಿಸಿಕೊಂಡು ರಸ್ತೆಗಳ ಮಧ್ಯೆ ಅಚಲರಾಗಿ ಕುಳಿತ ಹಸಿರು ಟೋಪಿಗಳ ರೈತರು ಎಲ್ಲ ವಾಹನಗಳನ್ನೂ ತಡೆದರು. ಮುಂಜಾನೆ ಆರು ಗಂಟೆಗೆ ಈ ಕಾನೂನು ಭಂಗ ಚಳವಳಿ ಆರಂಭವಾಯಿತು.

48 ದಿನಗಳ ಸರದಿ ಉಪವಾಸ ಸತ್ಯಾಗ್ರಹ ಮತ್ತು ಗಾಂಧಿಜಯಂತಿ ದಿನ ದಂದು ನಡೆಸಿದ ಬೃಹತ್ ಸಾಮೂಹಿಕ ಉಪವಾಸ ಸತ್ಯಾಗ್ರಹಗಳ ಮೂಲಕ ಮೊದಲ ಘಟ್ಟದ ಹೋರಾಟಕ್ಕೆ ಮಂಗಳ ಹಾಡಿದ ಮಲೆನಾಡು ರೈತರು ತಮ್ಮ ಹೋರಾಟಕ್ಕೆ ತೀವ್ರತೆ ತಂದುಕೊಡಲು ಇಂದು ಶಾಂತ ರೀತಿಯಲ್ಲಿ ಮಹಾತ್ಮಗಾಂಧಿ ಯವರ ಕಾನೂನು ಭಂಗ ಚಳವಳಿಯನ್ನು ಕೈಗೆತ್ತಿಕೊಂಡರು.

ಶಿವಮೊಗ್ಗ ತಾಲ್ಲೂಕಿನ ಅಬ್ಬಲಗೆರೆ, ಹೊಳಲೂರು, ಪುರ್ಲೆ, ನಿದಿಗೆ, ಗಾಜನೂರು ಮತ್ತು ಹರಿಗೆ ಗ್ರಾಮಗಳಲ್ಲಿ ಹಾಗೂ ಭದ್ರಾವತಿ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಈ ಚಳವಳಿ ನಡೆಯಿತು.

ಪೋಲೀಸ್ ವಲಯಗಳ ಪ್ರಕಾರ ಒಟ್ಟು 240 ರೈತರನ್ನು ಬಂಧಿಸಲಾಗಿದೆ. 20 ಜನರ ತಂಡಗಳು ಒಂದು ಪೋಲಿಸ್ ಠಾಣೆ ತುಂಬುತ್ತಲೇ ಇದ್ದವು. ಮಧ್ಯಾಹ್ನದ ನಂತರ ವಾಹನಗಳ ಓಡಾಟ ಮಾಮೂಲು ರೀತಿಯಲ್ಲಿತ್ತು. ರೈತ ಮುಖಂಡರ ಹೇಳಿಕೆಯ ಪ್ರಕಾರ ಈ ಕಾನೂನು ಭಂಗ ಚಳವಳಿ ರೈತರ ಬೇಡಿಕೆಗಳು ಈಡೇರುವವರೆಗೆ ಮುಂದುವರಿಯುತ್ತದೆ. ಮತ್ತು ಜಿಲ್ಲೆಯ ಎಲ್ಲ ತಾಲ್ಲೂಕುಗಳನ್ನು ವ್ಯಾಪಿಸಲಿದೆ.

ನಗರ ಪ್ರದೇಶಗಳಿಗೆ ಹಳ್ಳಿಗಳಿಂದ ಸರಬರಾಜಾಗುವ ಹಾಲು, ಮೊಸರು, ತರಕಾರಿ, ಆಹಾರಧಾನ್ಯ ಇತ್ಯಾದಿ ಎಲ್ಲ ಅಗತ್ಯ ವಸ್ತುಗಳನ್ನು ನಾಳೆಯಿಂದ ಚಳವಳಿಗಾರರು ತಡೆಯಲಿದ್ದಾರೆಂದು ತಿಳಿದು ಬಂದಿದೆ.

ಇಂದಿನ ಚಳವಳಿ ಶಾಂತವಾಗಿತ್ತು. ಅಹಿತಕರ ಘಟನೆಗಳು ಕಂಡು ಬರಲಿಲ್ಲ. ಸ್ಥಳೀಯ ಪೋಲಿಸ್ ಅಧಿಕಾರಿಗಳು ಸಭ್ಯ ರೀತಿಯಿಂದ ವರ್ತಿಸುವುದು ಕಂಡುಬಂತು.

ನೀರಾವರಿ ಅಭಿವೃದ್ಧಿ ತೆರಿಗೆ ವಜಾ, ಬೆಳೆಗೆ ಯೋಗ್ಯಬೆಲೆ, ಬೆಳೆ ವಿವರ ಇತ್ಯಾದಿ 19 ಬೇಡಿಕೆಗಳಿಗಾಗಿ ಶಿವಮೊಗ್ಗ ಜಿಲ್ಲಾ ರೈತ ಸಂಘದ ಆಶ್ರಯದಲ್ಲಿ ಮಲೆನಾಡ ರೈತರು ಕಳೆದ ಎರಡು ತಿಂಗಳಿಂದ ಹೋರಾಟ ನಡೆಸಿದ್ದಾರೆ.

ಅಕ್ಟೋಬರ್ 5

ಮಲೆನಾಡು ರೈತರ ಚಳವಳಿ : ಮತ್ತೆ ೩೦೦ ಮಂದಿ ಬಂಧನ :
ಶಿವಮೊಗ್ಗ, ಅ. 5– ಮಲೆನಾಡು ರೈತರು ಶಾಂತ ರೀತಿಯಿಂದ ಆರಂಭಿಸಿದ ಕಾನೂನು ಭಂಗ ಚಳವಳಿ ಉಗ್ರರೂಪ ತಾಳುವ ಸ್ಪಷ್ಟ ಸೂಚನೆ ಇಂದು ಕಂಡು ಬಂದವು.

ಭದ್ರಾವತಿ ಮತ್ತು ಶಿವಮೊಗ್ಗ ತಾಲ್ಲೂಕುಗಳಲ್ಲಿ ಮಾತ್ರ ನಡೆಯುತ್ತಿದ್ದ ರೈತರ ಕಾನೂನು ಭಂಗ ಚಳವಳಿ ಈಗ ಹೊನ್ನಾಳಿ ತಾಲ್ಲೂಕನ್ನು ಆಕ್ರಮಿಸಿದೆ.

ಗಾಜನೂರು, ಪುರ್ಲೆ, ಮಲೆಗುಪ್ಪ, ನಿದಿಗೆ, ಆಯನೂರು, ಹರಿಗೆ, ಕಾಚನಕಟ್ಟೆ, ಜೇಲೂರು, ಸಿಂಪನಗಡ್ಡೆ ಮುಂತಾದ ಊರುಗಳಲ್ಲಿ ರೈತರು ತಂಡೋಪತಂಡವಾಗಿ ಉತ್ಸಾಹದಿಂದ ಜೈಲು ತುಂಬುವ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಭದ್ರಾವತಿ, ಶಿವಮೊಗ್ಗ ಮತ್ತು ಹೊನ್ನಾಳಿ ತಾಲ್ಲೂಕುಗಳಿಂದ ಇಂದು ಮೂರು ನೂರಕ್ಕೂ ಹೆಚ್ಚು ಚಳವಳಿಗಾರರನ್ನು ಬಂಧಿಸಲಾಯಿತು. ಇದರಿಂದಾಗಿ ಒಟ್ಟು ಐದು ನೂರಕ್ಕೂ ಹೆಚ್ಚು ರೈತರು ಜೈಲನ್ನು ಸೇರಿದಂತಾಗಿದೆ.

ಹೊನ್ನಾಳಿಯಲ್ಲಿ ಅತ್ಯುತ್ಸಾಹದಿಂದ ಐದುನೂರಕ್ಕೂ ಹೆಚ್ಚು ರೈತರು ಕಾನೂನು ಭಂಗ ಚಳವಳಿಯಲ್ಲಿ ಭಾಗವಹಿಸಿದ್ದು, ಅವರಲ್ಲಿ 30 ಮಂದಿ ರೈತರನ್ನು ಮಾತ್ರ ಬಂಧಿಸಲಾಯಿತು.

ರಾಷ್ಟ್ರೀಯ ಹೆದ್ದಾರಿಗಳೂ ಸೇರಿದಂತೆ ಅನೇಕ ರಸ್ತೆಗಳಲ್ಲಿ ವಾಹನ ಸಂಚಾರ ಬೆಳಿಗ್ಗೆ 5 ಗಂಟೆಯಿಂದಲೇ ಸ್ಥಗಿತಗೊಂಡಿತು. ಮಧ್ಯಾಹ್ನದ ನಂತರ ರಸ್ತೆ ಸಂಚಾರ ಸುಗಮಗೊಂಡಿತು.

ಹಾಲು, ಹಣ್ಣು. ತರಕಾರಿ ಇತ್ಯಾದಿ ಅಗತ್ಯ ವಸ್ತುಗಳು ಹಳ್ಳಿಯಿಂದ ಪಟ್ಟಣ ಪ್ರದೇಶಗಳಿಗೆ ಹೋಗದಂತೆ ರೈತ ಚಳವಳಿಗಾರರು ತಡೆ ಹಿಡಿದುದರಿಂದ ಭದ್ರಾವತಿ, ಶಿವಮೊಗ್ಗ ಮತ್ತು ಹೊನ್ನಾಳಿಗಳಲ್ಲಿ ಹಾಲು ಸರಬರಾಜು ಯೋಗ್ಯ ಪ್ರಮಾಣದಲ್ಲಿ ನಡೆಯಲಿಲ್ಲ.

ಆಯನೂರಿನಲ್ಲಿ ಈ ದಿನವೇ ಕಾನೂನು ಭಂಗ ಚಳವಳಿ ಆರಂಭಗೊಂಡು ವಾರದ ಸಂತೆಯನ್ನು ಅಸ್ತವ್ಯಸ್ತಗೊಳಿಸಿತು.

ಗಾಜನೂರಿನಲ್ಲಿ ರೈತರ ಪ್ರವಾಹವೇ ರಸ್ತೆಯನ್ನು ಅಡ್ಡಗಟ್ಟಿ ನಿಂತಿತು. ಅನೇಕ ಊರುಗಳಲ್ಲಿ ಮಹಿಳೆಯರು ಮತ್ತು ಮಕ್ಕಳು ಚಳವಳಿಯ ಬೆಂಬಲಕ್ಕೆ ನಿಂತಿದ್ದರು.

ಹಸಿರು ಟೋಪಿಯ ಚಳವಳಿಗಾರರು ಅತ್ಯಂತ ಶಿಸ್ತು ಮತ್ತು ಶಾಂತಿಯಿಂದ ವರ್ತಿಸಿದುದರಿಂದ ಯಾವುದೇ ಅಹಿತಕರ ಘಟನೆ ನಡೆಯಲಿಲ್ಲ.

ಅಕ್ಟೋಬರ್ : 6 :

ಬಂಧನಕ್ಕೊಳಗಾಗಲು ರೈತರ ಅದಮ್ಯ ಉತ್ಸಾಹ : ಶಿವಮೊಗ್ಗ: ಅ. 6:– 'ಬಂಧಿಸಿ, ಬಂಧಿಸಿ, ಬಂಧಿಸಿ' ಅದಮ್ಯ ಉತ್ಸಾಹದಿಂದ ಬಂಧನಕ್ಕೊಳಗಾಗಲು ನೂರಾರು ಸಂಖ್ಯೆಯಲ್ಲಿ ಮುಂದೆ ಬರುತ್ತಿರುವ ಮಲೆನಾಡ ರೈತರನ್ನು ಕಂಡು ಪೊಲೀಸರು ದಿಗ್ಮೂಢರಾಗುತ್ತಿದ್ದಾರೆ.

ಯಾರನ್ನು ಬಂಧಿಸುವುದು, ಇಡಲು ಜೈಲುಗಳಲ್ಲಿ ಜಾಗವೆಲ್ಲಿ ? ಇಂಥ ಪ್ರಶ್ನೆಗಳಿಂದ ಅಧಿಕಾರಿಗಳ ತಲೆ ಬಿಸಿಯಾಗಿದೆ.

ಭದ್ರಾವತಿ, ಶಿವಮೊಗ್ಗ, ಹೊನ್ನಾಳಿ ತಾಲ್ಲೂಕುಗಳ ಜೊತೆಗೆ ಇಂದು ಹೊಸನಗರ ತಾಲ್ಲೂಕು ಸೇರಿಕೊಂಡು ರೈತರ ಹೋರಾಟಕ್ಕೆ ಇನ್ನೂ ಉಗ್ರಸ್ವರೂಪವನ್ನು ನೀಡಿತು.

ಮುಂಜಾನೆಯಿಂದ ಮಧ್ಯಾಹ್ನ ಮೂರು ಗಂಟೆಯವರೆಗೂ ಬಂಧನ ಕಾರ್ಯ ನಡೆಯಿತು. ಇಂದು 674 ರೈತ ಚಳವಳಿಕಾರರನ್ನು ಬಂಧಿಸಲಾಯಿತು. ಇದರಿಂದಾಗಿ ಶನಿವಾರದಿಂದ ಇಲ್ಲಿಯವರೆಗೆ 1300ಕ್ಕೂ ಹೆಚ್ಚು ಜನರ ಬಂಧನವಾಗಿದೆ.

ಭದ್ರಾವತಿಯಲ್ಲಿ : ಭದ್ರಾವತಿಯಲ್ಲಿ ಎರಡು ಸಾವಿರಕ್ಕೂ ಹೆಚ್ಚು ರೈತರು ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕಿ, ತಮ್ಮನ್ನು ಬಂಧಿಸುವಂತೆ ಒತ್ತಾಯಿಸಿದರು. ವಿದ್ಯುತ್ ಮಂಡಳಿ ಮತ್ತು ಬ್ಯಾಂಕುಗಳನ್ನು ಚಳವಳಿಗಾರರು ಮುತ್ತಿದ್ದರು.

ಕೆಲವು ಹಳ್ಳಿಗಳಲ್ಲಿ ಜನ ಸರದಿಯ ಮೇಲೆ ಸತ್ಯಾಗ್ರಹ ನಡೆಸಿ ಬಂಧನಕ್ಕೊಳಗಾದರು. ಇದರಿಂದಾಗಿ ಅನೇಕ ರಸ್ತೆಗಳಲ್ಲಿ ಸಂಚಾರ ಅಸ್ತವ್ಯಸ್ತವಾಯಿತು. ಬಿ. ಹೆಚ್. ರಸ್ತೆಯಲ್ಲಿ ನೂರಾರು ವಾಹನಗಳು ಸಾಲಾಗಿ ಗಂಟೆಗಳ ಕಾಲ ನಿಂತಿರುವ ದೃಶ್ಯ ಕಂಡು ಬಂತು.

ಘರ್ಷಣೆ–ಗಾಯ : ಸಂತೆಕಡೂರಿನಲ್ಲಿ ವಾಹನಗಳನ್ನು ತಡೆಯುವ ಬಗ್ಗೆ ಭಿನ್ನಾಭಿಪ್ರಾಯ ಬಂದು ಎರಡು ಗುಂಪುಗಳ ಮಧ್ಯೆ ಘರ್ಷಣೆ ನಡೆದು ಸುಮಾರು ಹತ್ತು ಜನರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ. ಚಿಕಿತ್ಸೆಗಾಗಿ ಕೆಲವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಉಳಿದ ಕಡೆಗಳಲ್ಲೆಲ್ಲ ಪರಿಸ್ಥಿತಿ ಶಾಂತವಾಗಿತ್ತು.

ಜಿಲ್ಲಾಧಿಕಾರಿ ತಿಮ್ಮಯ್ಯ ಮತ್ತು ಪೋಲಿಸ್ ಸೂಪರಿಂಟೆಂಡೆಂಟ್ ನಾಗರಾಜ್ ಪರಿಸ್ಥಿತಿಯನ್ನು ಹತೋಟಿಗೆ ತರಲು ಸುತ್ತಾಡುತ್ತಿದ್ದರು.

ನಿನ್ನೆಯಂತೆ ಇಂದೂ ಪಟ್ಟಣ ಪ್ರದೇಶಗಳಲ್ಲಿ ಹಾಲಿನ ಸರಬರಾಜು ಸರಿಯಾಗಿರಲಿಲ್ಲ.

ಅಕ್ಟೋಬರ್ : 7

ಇಡೀ ಜಿಲ್ಲೆಗೆ ಹಬ್ಬಿದ ರೈತರ ಚಳವಳಿ : ಸಾವಿರ ಮಂದಿ ಬಂಧನ : ಶಿವಮೊಗ್ಗ : ಅ. 7 : ನಾಲ್ಕು ದಿನಗಳ ಹಿಂದೆ ಕೇವಲ ಭದ್ರಾವತಿ ಮತ್ತು

ಶಿವಮೊಗ್ಗ ತಾಲ್ಲೂಕದಲ್ಲಿ ಆರಂಭವಾಗಿದ್ದ ಮಲೆನಾಡ ರೈತರ ಕಾನೂನುಭಂಗ ಚಳವಳಿ ಇಂದು ಇಡೀ ಜಿಲ್ಲೆಯನ್ನು ವ್ಯಾಪಿಸಿತು.

ತೀರ್ಥಹಳ್ಳಿ, ಸೊರಬ, ಸಾಗರ, ಶಿಕಾರಿಪುರ ಮತ್ತು ಚನ್ನಗಿರಿ ತಾಲ್ಲೂಕು ಗಳಲ್ಲಿ ಇಂದು ಚಳವಳಿ ಆರಂಭವಾಯಿತು. ಅನೇಕ ತರುಣರು ರಸ್ತೆಗಳನ್ನು ಅಡ್ಡ ಕಟ್ಟಿ ತಮ್ಮ ಬಂಧನಕ್ಕೆ ಆಗ್ರಹ ಪಡಿಸಿದರು. ಈ ಮೊದಲೇ ಚಳವಳಿ ಆರಂಭಿಸಿದ್ದ ಶಿವಮೊಗ್ಗ, ಭದ್ರಾವತಿ. ಹೊನ್ನಾಳಿ ಮತ್ತು ಹೊಸನಗರ ತಾಲ್ಲೂಕುಗಳ ಅನೇಕ ಹಳ್ಳಿಗಳಲ್ಲೂ ರೈತ ಚಳವಳಿಗಾರರು ಅಧಿಕ ಸಂಖ್ಯೆಯಲ್ಲಿ ಬಂಧನಕ್ಕೊಳಗಾದರು.

ಬಂಧಿತರ ಸಂಖ್ಯೆ ಗಂಟೆ ಗಂಟೆಗೂ ಹೆಚ್ಚುತ್ತಿತ್ತು. ಸಂಜೆಯಾದರೂ ರೈತರು ಅನೇಕ ಕಡೆ ಸತ್ಯಾಗ್ರಹ ನಡೆಸುತ್ತಿದ್ದರು. ಸುಮಾರು ಒಂದು ಸಾವಿರ ಜನ ಇಂದು ಬಂಧನಕ್ಕೊಳಗಾಗಿದ್ದಾರೆ. ಇದರಿಂದಾಗಿ ನಾಲ್ಕು ದಿನಗಳ ಕಾನೂನು ಭಂಗ ಚಳವಳಿ ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು 3000 ರೈತ ಚಳವಳಿಗಾರರನ್ನು ಸೆರೆಮನೆಗೆ ಕಳುಹಿಸಿದೆ.

ಶಕ್ತಿ ಪ್ರದರ್ಶನ : ಅತ್ಯಂತ ಶಿಸ್ತಿನಿಂದ ವರ್ತಿಸುತ್ತಿದ್ದ ರೈತರು ಯಾವುದೇ ಅಹಿತಕರ ಘಟನೆಗೆ ಅವಕಾಶ ಕೊಡಲಿಲ್ಲ.

ಸರ್ಕಾರದ ವಿಶೇಷ ಸಂದೇಶ ಹೊತ್ತು ಇಂದು ನಗರಕ್ಕೆ ಆಗಮಿಸಿದ ಡಿ.ಐ.ಜಿ ಕಾರ್ತಿಕೇಯನ್ ಅವರ ವಾಹನವನ್ನು ಚಳವಳಿಕಾರರು ಕಾರೆಹಳ್ಳಿ, ಬಾರಂದೂರು, ಕಡದಕಟ್ಟೆ, ಭದ್ರಾವತಿ, ಬಿದರೆ, ನಿದಿಗೆ, ಮಲವಗೊಪ್ಪ, ಹರಿಗೆ ಮತ್ತು ಇಸ್ಲಾಪುರ ಗಳಲ್ಲಿ ತಡೆದು ರೈತ ಶಕ್ತಿಯನ್ನು ಪ್ರದರ್ಶಿಸಿದರು.

ನಾಗರಿಕರ ತಲ್ಲಣ; ವಾಹನ ಸಂಚಾರ ಸ್ತಬ್ಧ : ಶಿವಮೊಗ್ಗ : ಅ. 7— ರೈತ ಚಳವಳಿ ಇಂದು ಶಿವಮೊಗ್ಗ ನಗರಕ್ಕೆ ಕಾಲಿರಿಸಿ ನಾಗರಿಕರನ್ನು ತಲ್ಲಣ ಗೊಳಿಸಿತು.

ರಸ್ತೆ ಚಳವಳಿಯಿಂದಾಗಿ ವಾಹನಗಳನ್ನು ಓಡಿಸುವುದು ಕಷ್ಟವಾಗುತ್ತಿದೆ ಎಂದು ಖಾಸಗಿ ಬಸ್ಸುಗಳ ಮಾಲೀಕರು ತಮ್ಮ ಬಸ್ಸುಗಳನ್ನು ನಿಲ್ಲಿಸಿದ್ದು ಮತ್ತು ಸರ್ಕಾರದ ಆದೇಶದ ಮೇರೆಗೆ ಸರ್ಕಾರಿ ವಾಹನಗಳ ಓಡಾಟವೂ ನಿಂತಿದ್ದು ಹಳ್ಳಿಗಳ ಚಳವಳಿ ಶಿವಮೊಗ್ಗಕ್ಕೆ ಕಾಲಿರಿಸಲು ಕಾರಣವಾಯಿತು.

ಸುಮಾರು 354 ಖಾಸಗಿ ಬಸ್ಸುಗಳು, 26 ಟ್ಯಾಕ್ಸಿಗಳು ಮತ್ತು 200

ಸರ್ಕಾರಿ ಬಸ್ಸುಗಳು ಓಡಾಟ ನಿಲ್ಲಿಸಿದುದರಿಂದಾಗಿ ಶಿವಮೊಗ್ಗೆಯ ಬೀದಿಗಳು ಇಂದು ಬೆಳಿಗ್ಗೆ ಬಿಕೋ ಎನ್ನುತ್ತಿದ್ದವು.

ವಾಹನಗಳ ಓಡಾಟ ಕಡಿಮೆ ಆದುದರಿಂದ ಶಿವಮೊಗ್ಗೆಯ ಸುತ್ತಮುತ್ತಲಿನ ಕೋಟೆ ಗಂಗೂರು, ದೇವಕಾಸಿಕೊಪ್ಪ, ಸಿಗ್ಲಿಪುರ, ಯಾಜವಳ್ಳಿ, ಕೊನಗದವಳ್ಳಿ, ಹಿರೆಕೊಪ್ಪ ಮೊದಲಾದ ಹಳ್ಳಿಗಳ ಉತ್ಸಾಹಿ ಯುವಕರು ನೂರಾರು ಸಂಖ್ಯೆಯಲ್ಲಿ ಬಂದು ಶಿವಮೊಗ್ಗೆಯ ಬೀದಿಗಳನ್ನು ತುಂಬಿ ಎಲ್ಲೆಲ್ಲೂ ಹಸಿರು ಕಾಣುವಂತೆ ಮಾಡಿದರು.

ಇವರು ಶಾಂತಿಗೆ ಭಂಗಬಾರದ ರೀತಿಯಲ್ಲಿ ಗೋಪಿ ಸರ್ಕಲ್ ಮತ್ತು ಶಿವಪ್ಪ ನಾಯಕ ಸರ್ಕಲ್ ಅನ್ನು ಪೂರ್ಣವಾಗಿ ಸುತ್ತುಗಟ್ಟಿ ವಾಹನಗಳ ಮತ್ತು ಜನರ ಸಂಚಾರವನ್ನು ತಡೆದರು. ಇವರನ್ನು ಬಂಧಿಸುವ ಕೆಲಸ ಪೋಲೀಸರಿಗೆ ತಲೆನೋವು ತಂದಿತು.

ಒಂದು ತಂಡವನ್ನು ಬಂಧಿಸಿದ ಕೂಡಲೇ ಮತ್ತೊಂದು ತಂಡ, ಸತ್ಯಾಗ್ರಹಕ್ಕೆ ಕೂರುತ್ತಿದ್ದುದರಿಂದ ಬೆಳಗಿನಿಂದ ಸಂಜೆ 5 ಗಂಟೆಯವರೆಗೂ ನೂರಾರು ಜನ ಹಸಿರು ಟೋಪಿಯ ಚಳವಳಿಗಾರರು ಈ ವೃತ್ತಗಳನ್ನು ಅಡ್ಡಗಟ್ಟಿದರು.

ಅನೇಕ ಅಂಗಡಿಗಳು ಮತ್ತು ಮಾರುಕಟ್ಟೆ ಕೆಲವಾರು ಗಂಟೆಗಳ ಕಾಲ ಮುಚ್ಚಲ್ಪಡುತ್ತಿದ್ದುವು. ಗಲಾಟೆಯಾಗಬಹುದೆಂಬ ಭಯದಿಂದ ವ್ಯಾಪಾರಿಗಳು ಯಾವುದೇ ಕ್ಷಣದಲ್ಲಿ ತಮ್ಮ ಅಂಗಡಿಗಳ ಬಾಗಿಲು ಮುಚ್ಚಲು ಸಿದ್ಧರಾಗಿ ವ್ಯಾಪಾರ ನಡೆಸುತ್ತಿದ್ದುದು ಕಂಡು ಬಂತು.

ಅಕ್ಟೋಬರ್ : 8

ಚಳವಳಿಯ ಬಿರುಸು ೧೦೦೦ ಜನ ಬಂಧನ : ಶಿವಮೊಗ್ಗ, ಅ. 8– ನಿನ್ನೆ ಶಿವಮೊಗ್ಗ ಜಿಲ್ಲೆಯನ್ನು ಪೂರ್ಣವಾಗಿ ವ್ಯಾಪಿಸಿದ ಮಲೆನಾಡು ರೈತರ ಕಾನೂನು ಭಂಗ ಚಳವಳಿ ಈ ದಿನವೂ ಅಷ್ಟೇ ಬಿರುಸಿನಿಂದ ನಡೆದು ಸುಮಾರು 1000 ಜನ ರೈತರು ಬಂಧನಕ್ಕೊಳಗಾದರು.

ಶಿವಮೊಗ್ಗ ನಗರದಲ್ಲಿ ಚಳವಳಿಕಾರರು ಇಂದು ಹೆಚ್ಚಿನ ಸಂಖ್ಯೆಯಲ್ಲಿ ಕಾಣಲಿಲ್ಲವಾದರೂ ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಉತ್ಸಾಹ ಮತ್ತು ಸಂಖ್ಯೆ ಬಿಳ್ಳಷ್ಟೂ ಇಳಿದಂತೆ ಕಾಣಲಿಲ್ಲ.

ರಸ್ತೆಗಳನ್ನೇ ಅಡ್ಡಗಟ್ಟಿ ಧರಣಿ ಕುಳಿತಿದ್ದ ಸತ್ಯಾಗ್ರಹಿಗಳು ದ್ವಿಚಕ್ರ ವಾಹನಗಳನ್ನೂ ಬಿಡದೆ ತಡೆಹಿಡಿದರು. ಹೀಗಾಗಿ ಓಡಾಟ ಪೂರ್ಣವಾಗಿ ಬಂದ್ ಆಗಿತ್ತು.

ಶಿವಮೊಗ್ಗ ನಗರದಲ್ಲಿ ಆಟೋಗಳ ಹೊರತು ಬೇರೆ ಯಾವ ವಾಹನಗಳ ಓಡಾಟವೂ ಇರಲಿಲ್ಲ. ಇಡೀ ನಗರ ಬಿಕೋ ಎನ್ನುತ್ತಿತ್ತು.

ತೀರ್ಥಹಳ್ಳಿ, ಸೊರಬ, ಸಾಗರ, ಶಿಕಾರಿಪುರ, ಚನ್ನಗಿರಿ, ಶಿವಮೊಗ್ಗ, ಭದ್ರಾವತಿ, ಹೊನ್ನಾಳಿ ಮತ್ತು ಹೊಸನಗರ ತಾಲ್ಲೂಕುಗಳ ಅನೇಕ ಹಳ್ಳಿಗಳಲ್ಲಿ ಉತ್ಸಾಹದಿಂದ ಚಳವಳಿಕಾರರು ಬಂಧನಕ್ಕೊಳಗಾದರು.

ಎಲ್ಲಿಯೂ ಅಹಿತಕರ ಘಟನೆ ನಡೆಯಲಿಲ್ಲ. ಎಲ್ಲವೂ ಶಾಂತವಾಗಿತ್ತು.

ನಿನ್ನೆಯಂತೆ ಈ ದಿನವೂ ಬಂಧಿತರ ಸಂಖ್ಯೆ ಗಂಟೆ ಗಂಟೆಗೂ ಹೆಚ್ಚುತ್ತಿತ್ತು. ಸರ್ಕಾರಿ ಹಾಗೂ ಖಾಸಗಿ ಬಸ್ಸುಗಳಲ್ಲಿ ಚಳವಳಿಕಾರರನ್ನು ತುಂಬಿ ತುಂಬಿ ಜೈಲಿಗೆ ರವಾನಿಸಲಾಗುತ್ತಿತ್ತು.

ಜೈಲಿನ ಮುಂದೆಯೂ ಇಂದು ಜನ ಜಾತ್ರೆ ನೆರೆದಿತ್ತು. ಬಂದವರಿಗೆ ಪ್ರವೇಶ ಕೊಡುವ ಅವಿರತ ಕಾರ್ಯದಲ್ಲಿ ಜೈಲು ಸಿಬ್ಬಂದಿ ಬೆಂದು ಬಸವಳಿಯಿತು. ಅನೇಕ ಬಂದಿಗಳಿಗೆ ಊಟ ಕೊಡುವ ವ್ಯವಸ್ಥೆ ಸರಿಯಾಗಿ ನಡೆಯದೆ ರೈತರು ಗದ್ದಲ ಎಬ್ಬಿಸುತ್ತಿದ್ದರು.

ಜೈಲಿನ ಸೂಪರಿಂಟೆಂಡೆಂಟ್ ಜಿ. ಶಂಕರನಾರಾಯಣ ಅವರು ತಮ್ಮ ಅಸಹಾಯಕತೆಯನ್ನು "ಪ್ರಜಾವಾಣಿ"ಗೆ ತಿಳಿಸಿದರು. ಬೇರೆಯ ಜೈಲುಗಳಿಗೆ ಬಂಧಿಗಳನ್ನು ಕಳುಹಿಸುವ ಕಾರ್ಯ ಇಂದೂ ಮುಂದುವರೆಯಿತು.

ಅಕ್ಟೋಬರ್ ; 9

ಬಿರುಸು - ಸಪ್ಪೆ : ಶಿವಮೊಗ್ಗ, ಅ. 9– ಮಲೆನಾಡು ರೈತರ ಆರನೇ ದಿನದ ಕಾನೂನು ಭಂಗ ಚಳವಳಿ ಕೆಲವು ಕಡೆ ಬಿರುಸಿನಿಂದ, ಕೆಲವು ಕಡೆ ಒಂದಿಷ್ಟು ಸಪ್ಪೆಯಾಗಿ ನಡೆದಿದೆ.

ಇಂದಿನ ಬಂಧಿತರ ಸಂಖ್ಯೆ ಖಚಿತವಾಗಿ ದೊರೆತಿಲ್ಲವಾದರೂ ಐದು ಸಾವಿರಕ್ಕೂ ಹೆಚ್ಚು ಜನ ಈಗಾಗಲೇ ಬಂಧನಕ್ಕೊಳಗಾಗಿದ್ದಾರೆ. ಇದರಿಂದಾಗಿ ಕಾನೂನುಭಂಗ ಚಳವಳಿ ಆರಂಭವಾದುದಿನಿಂದ ಇಲ್ಲಿನವರೆಗೆ ಸುಮಾರು ಆರು ಸಾವಿರಕ್ಕೂ ಹೆಚ್ಚು ಜನ ಬಂಧನಕ್ಕೊಳಗಾಗಿದ್ದಾರೆ.

ಬಳ್ಳಾರಿ, ಬೆಳಗಾವಿ ಜೈಲುಗಳು ತುಂಬಿ ಹೋಗಿದ್ದು, ಈ ಬಂಧಿತರನ್ನು ಕಲ್ಬುರ್ಗಿ ಜೈಲಿಗೆ ಕಳುಹಿಸಲಾಗುತ್ತಿದೆ.

ವಾಹನಗಳ ಸಂಚಾರ ಇಂದು ಕೆಲವು ಕಡೆ ಭಾಗಶಃ ನಡೆಯಿತು. ಮತ್ತೆ ಕೆಲವು ಕಡೆ ವಾಹನಗಳ ಸಂಚಾರ ಪೂರ್ಣವಾಗಿ ಬಂದ್ ಆಗಿತ್ತು.

ಬಂಧನಕ್ಕಾಗಿ ಒತ್ತಾಯ : ಅನೇಕ ಉತ್ಸಾಹಿಗಳು ಇಂದು ಶಿವಮೊಗ್ಗ ನಗರಕ್ಕೆ ನುಗ್ಗಿ ಗೋಪಿ ಸರ್ಕಲ್ ಅನ್ನು ಮುತ್ತಿ ವಾಹನ ಹಾಗೂ ಜನ ಸಂಚಾರಕ್ಕೆ ತಡೆಯೊಡ್ಡಿದರು. ಜಿಲ್ಲಾಧಿಕಾರಿಗಳ ಕಚೇರಿಗೂ ಕೆಲವರು ಬಂದು ತಮ್ಮನ್ನು ಬಂಧಿಸ ಬೇಕೆಂದು ಒತ್ತಾಯಿಸಿದರು.

ಮತ್ತೊಂದು ಹಳ್ಳಿಯ ಗುಂಪು ಜಾನಪದ ವಾದ್ಯಗಳೊಂದಿಗೆ ಕುಣಿಯುತ್ತ, ಘೋಷಣೆಗಳನ್ನು ಕೂಗುತ್ತಾ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಬಂಧನ ಆಗ್ರಹ ಪಡಿಸಿದರು. ಗಾಜನೂರಿನ ಬಳಿ ಸುಮಾರು ಇನ್ನೂರು ಮಹಿಳೆಯರು ಪ್ರದರ್ಶನ ನಡೆಸಿದರು. ಮಕ್ಕಳೂ ಈ ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ಹಾಲು, ಹಣ್ಣು, ತರಕಾರಿಯು ಇಂದೂ ನಗರಕ್ಕೆ ಪೂರೈಕೆಯಾಗಲಿಲ್ಲ. ನಾಗರಿಕರು ಮತ್ತು ಹೋಟೆಲ್ ಮಾಲೀಕರು ತೊಂದರೆಯನ್ನು ಅನುಭವಿಸಬೇಕಾಯಿತು.

ಜಿಲ್ಲೆಯಾದ್ಯಂತ ಇಂದೂ ಅಹಿತಕರ ಘಟನೆ ನಡೆದಿರುವ ವರದಿ ಬಂದಿಲ್ಲ.

ರೈತರ ಚಳವಳಿಗೆ ವಿದ್ಯಾರ್ಥಿಗಳು : ಶಿವಮೊಗ್ಗ, ಅ. 9- ಮಲೆನಾಡು ರೈತರ ಚಳವಳಿಗೆ ಇಂದು ವಿದ್ಯಾರ್ಥಿ ಸಮುದಾಯವೂ ಸೇರಿಕೊಂಡಿತು.

ನಗರದ ಏಳು ಕಾಲೇಜುಗಳ ಸುಮಾರು 5000 ವಿದ್ಯಾರ್ಥಿಗಳು ತರಗತಿಗಳಿಂದ ಹೊರ ಬಂದು ಘೋಷಣೆಗಳನ್ನು ಕೂಗುತ್ತ, ಹಾಡುತ್ತ, ನರ್ತಿಸುತ್ತ, ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಅರ್ಪಿಸಿದರು.

ಶಾಂತಿಯುತವಾಗಿ ನಡೆದ ಮೆರವಣಿಗೆಯ ವೇಳೆಯಲ್ಲಿ ವಿದ್ಯಾರ್ಥಿಗಳ ಗುಂಪೊಂದು ಇಂದಿರಾಗಾಂಧಿಯ ಬೃಹತ್ ಭಾವಚಿತ್ರವೊಂದನ್ನು ಒಡೆಯಿತಾದರೂ ಬೇರಾವ ಹಿಂಸಾಚಾರವೂ ನಡೆಯಲಿಲ್ಲ. ಕೆಲವೇ ಸಮಯದಲ್ಲಿ ಅಂಗಡಿಗಳೂ, ಹೋಟೆಲುಗಳೂ ಮುಚ್ಚಲ್ಪಟ್ಟವು.

ವಿದ್ಯಾರ್ಥಿ ಕ್ರಿಯಾ ಸಮಿತಿಯ ಶಿವರಾಂ, ವಿ. ರಾಜು, ಎಂ. ಆರ್. ರಾಜ್, ರಾಮಸ್ವಾಮಿ, ನರಸಿಂಹಮೂರ್ತಿ, ರಂಗನಾಥ್ ಮತ್ತು ಇತರರು ಮೆರವಣಿಗೆಯ ಮುಖಂಡತ್ವ ವಹಿಸಿದ್ದರು.

ಮಲೆನಾಡು ರೈತರ ಬೇಡಿಕೆಗಳನ್ನು ಮೂರು ದಿನಗಳೊಳಗಾಗಿ ಈಡೇರಿಸ ದಿದ್ದರೆ ವಿದ್ಯಾರ್ಥಿಗಳು ತರಗತಿಗಳಿಗೆ ಬಹಿಷ್ಕಾರ ಹಾಕಿ ರೈತರೊಂದಿಗೆ ಹೋರಾಟ ಕ್ಕಿಳಿಯಬೇಕಾಗುವುದೆಂದು ನಗರ ವಿದ್ಯಾರ್ಥಿ ಕ್ರಿಯಾ ಸಮಿತಿ ಅಧ್ಯಕ್ಷ ಚಮೇನಹಳ್ಳಿ ರಾಜಶೇಖರ್ ಹೇಳಿಕೆಯೊಂದರಲ್ಲಿ ಎಚ್ಚರಿಕೆ ನೀಡಿದ್ದಾರೆ.

ಅಕ್ಟೋಬರ್ : 10

ರೈತರ ಕಾನೂನು ಭಂಗ ಚಳವಳಿ ಮುನ್ನಡೆ : ಎಲ್ಲ ಸರ್ಕಾರಿ ಕಚೇರಿ ಸ್ತಬ್ಧ

ಶಿವಮೊಗ್ಗ, ಅ : 10–ಸರ್ಕಾರದ ಆಡಳಿತ ಯಂತ್ರಕ್ಕೆ ನೇರವಾಗಿ ಚಳ ವಳಿಯ ಎರಡನೇ ಘಟ್ಟದ ಕಾರ್ಯಕ್ರಮ ಇಂದು ಜಿಲ್ಲೆಯಾದ್ಯಂತ ಆರಂಭವಾಯಿತು.

ರಾಜ್ಯ ಸರ್ಕಾರ ಕಚೇರಿಗಳಿಗೆ ಬೀಗ ಹಾಕಿ, ಹಸಿರು ಪತಾಕೆ ಹಾರಿಸಿ, ಗಾಂಧೀಜಿಯವರ ಭಾವ ಚಿತ್ರವನ್ನು ಇಟ್ಟುಕೊಂಡು ಹಸಿರು ಟೋಪಿಯ ಚಳವಳಿ ಗಾರರು ಕಚೇರಿಗಳ ಮಧ್ಯೆ ಪಿಕೆಟಿಂಗ್ ನಡೆಸಿದರು. ಒಂದು ತಂಡದ ಬಂಧನವಾದರೆ ಮತ್ತೊಂದು ತಂಡ ಪಿಕೆಟಿಂಗ್ ಕೂರುತ್ತಿತ್ತು. ಹೀಗಾಗಿ ಇಡೀ ದಿನ ಯಾವ ಕಚೇರಿಯೂ ಕೆಲಸ ಮಾಡಲು ಸಾಧ್ಯವಾಗಲಿಲ್ಲ.

ಬೆಂಬಲ : ಜಿಲ್ಲಾಧಿಕಾರಿಗಳ ಕಚೇರಿ, ತಾಲ್ಲೂಕು ಕಚೇರಿಗಳು, ವಿದ್ಯುತ್ ಮಂಡಳಿ, ಆಹಾರ ಇಲಾಖೆ, ರಸ್ತೆ ಸಾರಿಗೆ ಕಚೇರಿ, ಮಾರಾಟ ತೆರಿಗೆ, ವರಮಾನ ತೆರಿಗೆ ಕಚೇರಿಗಳು ಲೋಕೋಪಯೋಗಿ ಇಲಾಖೆ, ಇಂಜಿನಿಯರು ಕಚೇರಿ–ಹೀಗೆ ಜಿಲ್ಲೆಯ ಅನೇಕ ರಾಜ್ಯ ಸರ್ಕಾರಿ ಕಚೇರಿಗಳ ಕಾರ್ಯ ಇಂದು ಪೂರ್ಣ ಸ್ತಬ್ಧ ಗೊಂಡಿತ್ತು.

ನ್ಯಾಯವಾದಿಗಳು ರೈತರಿಗೆ ಬೆಂಬಲ ಸೂಚಿಸಿ ನ್ಯಾಯಾಲಯಕ್ಕೆ ಬಹಿಷ್ಕಾರ ಹಾಕಿದ ಕಾರಣ ಶಿವಮೊಗ್ಗ ನ್ಯಾಯಾಲಯ ಇಂದು ಕಾರ್ಯ ನಡೆಸಲಿಲ್ಲ.

ಶಿವಮೊಗ್ಗ, ನಗರ ಸಭಾ ಕಚೇರಿಯನ್ನು ಚಳವಳಿಕಾರರು ಮುತ್ತಿರಲಿಲ್ಲ. ಅಲ್ಲಿ ಕೆಲಸ ನಡೆಯಿತು.

ಜಿಲ್ಲಾ ಆಸ್ಪತ್ರೆಗೆ ಚಳವಳಿಕಾರರು ರಿಯಾಯಿತಿ ತೋರಿಸಿದ್ದು, ಅಲ್ಲಿ ಕೆಲಸ ಸುಸೂತ್ರವಾಗಿ ನಡೆಯಿತು.

ನಗರದಲ್ಲಿ ಬ್ಯಾಂಕುಗಳನ್ನೂ ಭದ್ರತೆಯ ದೃಷ್ಟಿಯಿಂದ ಸ್ವಪ್ರೇರಣೆಯಿಂದ ಮುಚ್ಚಲಾಯಿತು. ಕೆಲವು ಬ್ಯಾಂಕುಗಳು ಬಾಗಿಲು ಮುಚ್ಚಿಕೊಂಡು ವ್ಯವಹಾರ ನಡೆಸಿದವೆಂದು ತಿಳಿದು ಬಂದಿದೆ.

ಶಿವಮೊಗ್ಗ, ಭದ್ರಾವತಿ, ಹೊನ್ನಾಳಿ, ಚನ್ನಗಿರಿ, ಹೊಸನಗರ, ತೀರ್ಥಹಳ್ಳಿ, ಸಾಗರ, ಸೊರಬ, ಶಿಕಾರಿಪುರ, ತಾಲ್ಲೂಕುಗಳಲ್ಲಿಯೂ ರಾಜ್ಯ ಸರ್ಕಾರಿ ಕಚೇರಿಗಳ ಮುಂದೆ ಪಿಕೆಟಿಂಗ್ ಕಾರ್ಯಕ್ರಮ ನಡೆದಿರುವ ವರದಿಗಳು ಬಂದಿದೆ. ಕೆಲವು ಹಳ್ಳಿಗಳಲ್ಲಿ ಚಳವಳಿಕಾರರು ಬ್ಯಾಂಕುಗಳ ಮುಂದೆ ಪಿಕೆಟಿಂಗ್ ನಡೆಸಿದರೆಂದು ತಿಳಿದು ಬಂದಿದೆ.

ಹಳ್ಳಿಗಳಿಂದ ಚಳವಳಿಕಾರರು ಕಚೇರಿಗಳು ಆರಂಭವಾಗುವವೇಳೆಗೆ ಬಂದು ಪಿಕೆಟಿಂಗ್ ಕಾರ್ಯ ಆರಂಭಿಸಿದರು. ಕೆಲವು ಕಚೇರಿಗಳಿಗೆ ಚಳವಳಿಕಾರರು ಬರುವುದು ತಡವಾದ ಕಾರಣ ಕೆಲವು ಕಚೇರಿಗಳಲ್ಲಿ ಅರ್ಧಗಂಟೆ ಅಥವಾ ಮುಕ್ಕಾಲು ಗಂಟೆಯ ಕಾಲ ಕೆಲಸ ನಡೆಯಿತು.

ಚಳವಳಿಕಾರರು ಶಾಂತರೀತಿಯಿಂದ ಕಚೇರಿ ಸಿಬ್ಬಂದಿಯನ್ನು ಮನೆಗೆ ಹೋಗುವಂತೆ ಪ್ರಾರ್ಥಿಸಿದರು. ಮರು ಮಾತಿಲ್ಲದೆ ಹೊರ ಬಂದ ನೂರಾರು ಸರ್ಕಾರಿ ನೌಕರರು ದಿನದ "ಕಡ್ಡಾಯ ರಜೆ"ಯನ್ನು ಅನಂದಿಸಬೇಕಾಯಿತು.

ಬಂಧನಕ್ಕೊಳಗಾದವರ ಸಂಖ್ಯೆ ಇಂದು 800ನ್ನು ದಾಟಿರುವುದಾಗಿ ತಿಳಿದು ಬಂದಿದೆ. ಜೈಲುಗಳಲ್ಲಿ ತುಂಬಿದ್ದು ಪೋಲೀಸರು ಅನೇಕ ಕಡೆ ಚಳವಳಿಕಾರರನ್ನು ಬಂಧಿಸುವ ಕಾರ್ಯದಲ್ಲಿ ಉತ್ಸಾಹ ತೋರಲಿಲ್ಲ. ಭದ್ರಾವತಿಯ ಸರ್ಕಾರಿ ಕಚೇರಿಗಳ ಮುಂದೆ ನೂರಾರು ಚಳವಳಿಕಾರರು ಪಿಕೆಟಿಂಗ್ ನಡೆಸಿದರಾದರೂ ಅವರಲ್ಲಿ ಬಂಧಿಸಿದ್ದು ಕೆಲವರನ್ನು ಮಾತ್ರ.

ಎಲ್ಲಿಯೂ ಅಹಿತಕರ ಘಟನೆ ನಡೆಯಲಿಲ್ಲ. ಸರ್ಕಾರದ ದಾಖಲೆಗಳು, ಪತ್ರಗಳು ಸುರಕ್ಷಿತವಾಗಿದ್ದುವು.

ಭಾಗ ೩

ಸತ್ಯ - ಸ್ವಾರಸ್ಯ

ಚಳವಳಿ ಎಷ್ಟೇ ಗಂಭೀರವಾಗಿ ನಡೆದರೂ, ಉಗ್ರಸ್ವರೂಪ ಪಡೆದುಕೊಂಡರೂ, ಅದರ ನೆರಳಲ್ಲಿ ಅನೇಕ ಸ್ವಾರಸ್ಯ ಸಂಗತಿಗಳು ನಡೆಯುತ್ತದೆ. ನೋಡಲು ಸರಳವಾಗಿ ಕಂಡರೂ ಕೆಲವು ಐತಿಹಾಸಿಕ ದಾಖಲೆಗಳಾಗಿ ಉಳಿಯುವ

ಗಾಂಭೀರ್ಯವನ್ನೂ ಪಡೆದುಕೊಂಡಿರುತ್ತವೆ. ಮಲೆನಾಡ ರೈತ ಚಳವಳಿಯಲ್ಲಿ ಇಂಥ ಸಂಗತಿಗಳಿಗೆ ಬರವಿರಲಿಲ್ಲ. ಉದಾಹರಣೆಗೆ ಕೆಲವನ್ನು ನೋಡಬಹುದು.

ಜೈಲಿನಲ್ಲಿ ಜಾಗವಿಲ್ಲ : ಶಿವಮೊಗ್ಗ, ಅ. 6 : ಶಿವಮೊಗ್ಗ ಜೈಲಿನಲ್ಲಿ ಈಗ ಕಾಲಿಡಲೂ ಜಾಗವಿಲ್ಲ. ಕೇವಲ 167 ಜನರಿಗೆ ಮಾತ್ರ ಸ್ಥಳವಕಾಶ ಕಲ್ಪಿಸಿ ಕೊಡಲು ಸಾಧ್ಯವಿರುವ ಈ ಜೈಲಿಗೆ ಈಗ ರೈತ ಚಳವಳಿಗಾರರ ಪ್ರವಾಹವೇ ನುಗ್ಗಿ ಬಂದಿದೆ.

ನಿನ್ನೆ ರಾತ್ರಿಯ ಊಟದ ಕಾರ್ಯಕ್ರಮ ಸಂಜೆ 5ಕ್ಕೆ ಆರಂಭವಾಗಿ ಬೆಳಗಿನ ಜಾವ 2 ಗಂಟೆಯವರೆಗೂ ನಡೆಯಿತು. ಬಳ್ಳಾರಿ ಜೈಲಿಗೆ ರವಾನಿಸಿದ ರೈತ ಸತ್ಯಾಗ್ರಹಿಗಳಿಗೆ ನಿನ್ನೆ ಜೈಲಿನಲ್ಲಿ ಊಟ ಒದಗಿಸಲು ಸಾಧ್ಯವಾಗದೆ ಜ್ಯೂಯಲ್ ರಾಕ್‌ನಲ್ಲಿ ಭೋಜನವನ್ನು ವ್ಯವಸ್ಥೆಮಾಡಲಾಗಿತ್ತು.

ಈ ಜೈಲಿನಲ್ಲಿ ಒಬ್ಬ ಜೈಲರ್ ಒಬ್ಬ ಸೂಪರಿಂಟೆಂಡೆಂಟ್ ಮತ್ತು 18 ಜನ ವಾರ್ಡರುಗಳಿದ್ದಾರೆ. ಇವರಿಗೆ ಕಳೆದ ಮೂರು ದಿನಗಳಿಂದ ಹಗಲು–ರಾತ್ರಿಗಳ ವ್ಯತ್ಯಾಸ ತಿಳಿಯುತ್ತಿಲ್ಲ. ವಿಶ್ರಾಂತಿ ಪದದ ಅರ್ಥವೂ ಈಗ ಇವರಿಗೆ ಮರೆತು ಹೋಗಿದೆ.

ಹೃದಯಸ್ಪರ್ಶಿ, ವೀರೋಚಿತ ಬೀಳ್ಕೊಡುಗೆ : ಶಿವಮೊಗ್ಗ, ಅ. 6– ಹಾರ ಹಾಕಿದರು, ಆರತಿ ಎತ್ತಿದರು. ಶುಭ ಹರಸಿದರು. ಹರ್ಷಾತಿರೇಕದಿಂದ ಬೀಳ್ಕೊಟ್ಟರು.

ವೀರಯೋಧರನ್ನು ಯುದ್ಧರಂಗಕ್ಕೆ ಕಳುಹಿಸಿಕೊಡುವ ಮಾದರಿಯಲ್ಲಿ ಇಂದು ರೈತ ಚಳವಳಿಕಾರರನ್ನು ಜೈಲಿಗೆ ಕಳುಹಿಸಿಕೊಟ್ಟವರು ಗಾಜನೂರಿನ ಜನತೆ.

ನೂರಾರು ಸಂಖ್ಯೆಯಲ್ಲಿ ನೆರೆದ ಜನ ಹಸಿರು ಟೋಪಿಯ ಚಳವಳಿಕಾರರನ್ನು ಜೈಲಿಗೆ ಕಳುಹಿಸಿಕೊಟ್ಟ ಈ ದೃಶ್ಯ ಹೃದಯಸ್ಪರ್ಶಿಯಾಗಿತ್ತು.

ಈ ಜಿಲ್ಲೆಯಲ್ಲಿ ಈಗ ಜೈಲಿಗೆ ಹೋಗುವುದು ಒಂದು ಗೌರವದ ಪ್ರತಿಷ್ಠೆಯ ವಿಷಯವಾಗಿದೆ. ಹೀಗಾಗಿ ಯುವಜನರ ನೂಕುನುಗ್ಗಲು.

"ಮುಖ್ಯಮಂತ್ರಿಗೆ ಬಿಲ್ ಕಳುಹಿಸಿ" ಬೆಳಗಾವಿ, ಅ. 10– ಜೈಲಿನಲ್ಲಿ ಊಟ ತಿಂಡಿಗೆ ಸರಿಯಾದ ವ್ಯವಸ್ಥೆ ಇಲ್ಲ. ಹಸಿದ ಹೊಟ್ಟೆ ತಾಳಲಾರದೆ ಹಿಂಡಲಗಿ

ಜೈಲಿನಿಂದ ಬೆಳಗಾವಿ ನಗರದವರೆಗೆ ಕಾಲ್ನಡಿಗೆಯಲ್ಲಿ ಬಂದ ಶಿವಮೊಗ್ಗದ ಕೆಲವು ರೈತ ಸತ್ಯಾಗ್ರಹಿಗಳು ಕೆಲ ಹೋಟೆಲ್‌ಗಳಿಗೆ ನುಗ್ಗಿದರು.

"ತಿಂಡಿ, ಕಾಫಿ, ಆದ ಬಳಿಕ ಮಾಣಿ ಬಿಲ್ ಕೇಳಿದಾಗ ಮುಖ್ಯಮಂತ್ರಿ ಗುಂಡೂರಾಯರಿಗೇ ಕಳಿಸಿ" ಎಂದು ಹೇಳಿ ನಗುತ್ತ ಹೊರಟು ಹೋದರೆಂದು ಹೇಳಲಾಗಿದೆ.

ಹಾಲು ಕೊಟ್ಟು ದಂಡ ತೆತ್ತರು : ಶಿವಮೊಗ್ಗ, ಅ. 9 : ಹಾಲು ಪೂರೈಕೆ ಮಾಡಿದರೆ ನೂರು ರೂಪಾಯಿ ದಂಡ ವಿಧಿಸುವ ವಿಶೇಷ "ಕಾನೂನು" ಇಲ್ಲಿಗೆ ಸಮೀಪದ ಗಾಡಿಕೊಪ್ಪ ಗ್ರಾಮದಲ್ಲಿ ಕಳೆದ ಆರು ದಿನಗಳಿಂದ ಜಾರಿಯಲ್ಲಿತ್ತು.

ಈ "ಕಾನೂನ"ನ್ನು ಮಾಡಿದವರು, ಗ್ರಾಮದ ಮುಖಂಡರು. ನಗರ ಪ್ರದೇಶಗಳಿಗೆ ಹಾಲು ಅಥವಾ ತರಕಾರಿಯ ಪೂರೈಕೆ ಪೂರ್ಣವಾಗಿ ನಿಲ್ಲಬೇಕೆಂಬ ಕಾರಣದಿಂದ ರೈತ ಚಳವಳಿಕಾರರು ಈ ನಿಯಂತ್ರಣವನ್ನು ಹಾಕಿದ್ದರು. ನಗರಕ್ಕೆ ಹಾಲನ್ನು ಪೂರೈಸುವ ರೈತನನ್ನು ಹಿಡಿದು ಕೊಟ್ಟವರಿಗೆ 30 ರೂ. ಗಳನ್ನು ಬಹುಮಾನವಾಗಿ ಕೊಡುವ ಘೋಷಣೆಯನ್ನೂ ಈ ಗ್ರಾಮ ಮಾಡಿತ್ತು.

ದಂಡದ ರೂಪದಲ್ಲಿ ಸಂಗ್ರಹವಾದ ಹಣ 500 ರೂ. ಹಾಲು ಮಾರಿದ್ದು ಕೇವಲ ಅರ್ಧ ಲೀಟರು, ಒಂದು ಲೀಟರು, ಎರಡು ಮತ್ತು ಮೂರು ಲೀಟರುಗಳು.

ಚಳವಳಿಯ ವಿವಿಧ ದೃಶ್ಯಗಳು : ಶಿವಮೊಗ್ಗ. ಅ. 7 : ಶನಿವಾರದಿಂದ ಮಲೆನಾಡ ರೈತರು ಆರಂಭಿಸಿರುವ ಕಾನೂನು ಭಂಗ ಚಳವಳಿಯ ವಿವಿಧ ದೃಶ್ಯಗಳು ನೋಡಲು ರಮ್ಯ.

ಒಂದೊಂದು ಹಳ್ಳಿಯಲ್ಲಿ ಒಂದೊಂದು ಬಗೆ, ಒಂದೊಂದು ತೆರನ ಮೋಜು. ರಸ್ತೆಗಳನ್ನು ಅಡ್ಡಗಟ್ಟಿ ಮಲಗಿದ ಉತ್ಸಾಹಿಗಳು. ರಸ್ತೆಯ ಮೇಲೆ ನೃತ್ಯ ಆರಂಭಿಸಿ ರಸ್ತೆ ಸಂಚಾರ ನಿಲ್ಲಿಸಿದ ಮೋಜುಗಾರರು, ಹಾಡುತ್ತ, ಘೋಷಣೆ ಕೂಗುತ್ತ ಮೈಮರೆತವರು, ಸ್ಥಳದಲ್ಲಿಯೇ ಲಾವಣಿ ಕಟ್ಟಿದವರು.

ಶಾಲೆಗಳಿಗೆ ರಜೆ ಇರುವ ಕಾರಣ ಮಕ್ಕಳೂ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ; ನಿಂತ ವಾಹನಗಳ ಮೇಲೆ ಘೋಷಣೆ ಬರೆಯುತ್ತಾರೆ.

ಎಲ್ಲ ಕಡೆಯಲ್ಲೂ ಸಾಮಾನ್ಯವಾಗಿ ಮಹಾತ್ಮಾ ಗಾಂಧಿಯವರು ಫೋಟೋ ಇರುತ್ತದೆ. ಜೊತೆಗೆ ಅವರ ಶಾಂತಿ-ಶಿಸ್ತುಗಳೂ.

ರೈತ ಚಳವಳಿ ಬಿಸಿ : ಹಾಲು ಮೊಸರು ತರಕಾರಿಗೆ ಪರದಾಟ :

ಶಿವಮೊಗ್ಗ, ಅ. 8 "ಹಾಲಿಲ್ಲ, ಮೊಸರಿಲ್ಲ, ಮಜ್ಜಿಗೆಯಂತೂ ನೀರೋ ನೀರು, ಸಾಂಬಾರುಗಳಲ್ಲಿ ತರಕಾರಿಯ ತುಂಡುಗಳು ತೇಲುತ್ತಲೇ ಇಲ್ಲ...."

ಇದು ಶಿವಮೊಗ್ಗ, ಭದ್ರಾವತಿ ನಗರಗಳ ಪರಿಸ್ಥಿತಿ. ಹೋಟೆಲುಗಳಿಗೆ ಹಾಲಿನ ಪುಡಿಯೇ ಗತಿಯಾಗಿದೆ. ನಾಗರಿಕರು ಶೀಸೆ ಹಿಡಿದು ಹಾಲಿಗಾಗಿ ಬೀದಿ ಬೀದಿ ಅಲೆಯುತ್ತಿದ್ದಾರೆ. ಶೇಖರಣೆ ಇಲ್ಲದ ಕಾರಣ ಡೇರಿಯಿಂದ ಹಾಲು ಪೂರೈಕೆಯಾಗಿಲ್ಲ.

ಹಳ್ಳಿಗಳಿಂದ ಪೂರೈಕೆಯಾಗುವ ಮೊಸರು, ತರಕಾರಿ ಮತ್ತು ಸೌದೆಗಳನ್ನು ಈ ದಿನವೂ ರೈತ ಚಳವಳಿಗಾರರು ದಾರಿ ಮಧ್ಯದಲ್ಲೇ ತಡೆ ಹಿಡಿದರು. ಕೆಲವರು ಸ್ವಪ್ರೇರಣೆಯಿಂದಲೇ ಪೂರೈಕೆ ಮಾಡಿಲ್ಲ.

ಮಾರುಕಟ್ಟೆಯಲ್ಲಿ ತರಕಾರಿ ಇರಲಿಲ್ಲ. ಇದ್ದಬದ್ದ ಹಳೆಯ ತರಕಾರಿ ಬೆಲೆ ಒಂದಕ್ಕೆ ಎರಡರಷ್ಟು ಹೆಚ್ಚಾಗಿತ್ತು.

ವಾರ್ಡರುಗಳಿಗೇ ಜೈಲು : ಶಿವಮೊಗ್ಗ, ಅ. 11 : ಜೈಲಿಗೆ ಬಂದಿರುವ ಬಂಧಿಗಳನ್ನು ಒಳಗೆ ಹಾಕಿ ಕಾಯುವ ವಾರ್ಡರುಗಳನ್ನೇ ಇಂದು ಮಲೆನಾಡ ರೈತ ಚಳವಳಿಕಾರರು ಸ್ವಲ್ಪ ಹೊತ್ತು ಬಂಧನದಲ್ಲಿಟ್ಟು ತಮ್ಮ ಕೋಪವನ್ನು ತೋರಿದರು.

ಜೈಲಿನಲ್ಲಿ ಊಟ, ವಸತಿ ದೊರೆಯದೆ ಕಂಗಾಲಾದ ರೈತ ಸತ್ಯಾಗ್ರಹಿಗಳು ಸಹನೆ ಕಳೆದುಕೊಂಡು ಐದು ಜನ ವಾರ್ಡರುಗಳನ್ನು ಥಳಿಸಿ ಸ್ವಲ್ಪ ಹೊತ್ತು ಕೂಡಿ ಹಾಕಿದ್ದರು. ನಂತರ ಅವರನ್ನು ಬಿಡುಗಡೆ ಮಾಡಲಾಯಿತು.

ಕೇವಲ 18 ಜನ ವಾರ್ಡರುಗಳಿರುವ ಈ ಜೈಲಿಗೆ ನೂರಾರು ಚಳವಳಿಕಾರರು ಪ್ರವಾಹದಂತೆ ಬಂದಿದ್ದಾರೆ.

ಶಿವಮೊಗ್ಗ ಜೈಲಿಗೆ ರೈತರ ಪ್ರವಾಹ : ಶಿವಮೊಗ್ಗ, ಅ. 7 : ನಿಮಿಷ ನಿಮಿಷಕ್ಕೂ ಶಿವಮೊಗ್ಗದ ಜೈಲಿಗೆ ರೈತ ಚಳವಳಿಕಾರರು ಬರುತ್ತಲೇ ಇದ್ದಾರೆ.

ನಿನ್ನೆ ಮತ್ತು ಭಾನುವಾರ ಬಳ್ಳಾರಿಯ ಜೈಲನ್ನು ತುಂಬಿದ ಮಲೆನಾಡ ರೈತರು ಇಂದು ಬೆಳಗಾವಿ ಜೈಲನ್ನು ತುಂಬಲು ಬರುತ್ತಿದ್ದಾರೆ. ಈ ವೇಳೆಗೆ 200ಕ್ಕೂ ಹೆಚ್ಚು ಬಂಧಿಗಳನ್ನು ಬೆಳಗಾವಿ ಜೈಲಿಗೆ ಕಳುಹಿಸಲಾಗಿದೆಯೆಂದು ತಿಳಿದು ಬಂದಿದೆ.

ಪರೀಕ್ಷೆಗೆ ಬದಲು ಜೈಲಿಗೆ ಹೋದ : ಶಿವಮೊಗ್ಗ, ಅ. 7 ; ಪರೀಕ್ಷೆಗೆ ಹೋಗಬೇಕಾಗಿದ್ದ ವಿದ್ಯಾರ್ಥಿಯೊಬ್ಬ ಉತ್ಸಾಹದಿಂದ ಚಳವಳಿಗಾರರ ಜತೆಯಲ್ಲಿ ಜೈಲಿಗೆ ಹೋದ ಪ್ರಸಂಗವೊಂದು ವರದಿಯಾಗಿದೆ.

ಪುರ್ಲೆ ಗ್ರಾಮದಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಯೊಬ್ಬ ಉತ್ಸಾಹ ತಡೆಯಲಾರದೆ ಚಳವಳಿಗೆ ಧುಮುಕಿದ. ಪೋಲೀಸರು ಬಂಧಿಸಿ ಜೈಲಿಗೆ ಕರೆದೊಯ್ದರು. ನಂತರ ಜಿಲ್ಲಾ ಮ್ಯಾಜಿಸ್ಟ್ರೇಟರು ಈ ವಿಷಯ ತಿಳಿದು ಹುಡುಗನನ್ನು ಬಿಡುಗಡೆ ಮಾಡಿ ಪರೀಕ್ಷೆಗೆ ಕೂರಲು ಅವಕಾಶ ಮಾಡಿಕೊಟ್ಟರು.

ರೈತರ ಸಹನೆ : ಶಿವಮೊಗ್ಗ, ಅ. 7 : ಮಲೆನಾಡ ರೈತರು ಆರಂಭಿಸಿರುವ ಚಳವಳಿಯಲ್ಲಿ ಸಹನೆ, ಶೀಲತೆ ಮತ್ತು ಹೃದಯವಂತಿಕೆ ವಿಶೇಷವಾಗಿ ಕಂಡುಬರುತ್ತಿವೆ.

ತಾಸುಗಟ್ಟಲೆ ಬಸ್ಸುಗಳನ್ನು ತಡೆಹಿಡಿಯುವ ರೈತರು ಪ್ರಯಾಣಿಕರಿಗೆ ತೊಂದರೆಯಾಗಬಾರದೆಂಬ ದೃಷ್ಟಿಯಿಂದ ಅವರಿಗೆ ಹಾಲು, ಕೆಲವು ಕಡೆ ಊಟ ನೀಡಿದ ಪ್ರಸಂಗಗಳು ವರದಿಯಾಗಿವೆ. ಹಳ್ಳಿಯ ಜನ ಸ್ವಪ್ರೇರಣೆಯಿಂದ ಹಾಲು, ಅಡಿಗೆ ತಯಾರಿಸಲು ಅಕ್ಕಿ, ಬೇಳೆಗಳನ್ನು ನೀಡಿದ್ದಾರೆ.

ಕೆಲವು ಕಡೆ ರೈತ ಚಳವಳಿಕಾರರು ಈ ಬಗೆಯ ಖರ್ಚುಗಳಿಗೆಂದು ವಾಹನಗಳ ಮಾಲೀಕರಿಂದ ವಂತಿಗೆಯನ್ನು ವಸೂಲು ಮಾಡಿದ ಉದಾಹರಣೆಗಳು ಇವೆ.

ರಸ್ತೆಗಳನ್ನು ಅಡ್ಡಗಟ್ಟಿದ ಸತ್ಯಾಗ್ರಹಿಗಳು ಯಾವ ವಾಹನವನ್ನೂ ಮುಂದಕ್ಕೆ ಬಿಡುವುದಿಲ್ಲ. ಆದರೆ ತುರ್ತಾಗಿ ಆಸ್ಪತ್ರೆಗೆ ಹೊರಟವರ ಬಗ್ಗೆ ಅಥವಾ ಇನ್ನಾವುದೇ ತೊಂದರೆಗೀಡಾದವರ ಬಗ್ಗೆ ಇವರು ರಿಯಾಯಿತಿ ತೋರಿಸುತ್ತಾರೆ.

ಜಾತಿ ವೈಷಮ್ಯ ಮೆಟ್ಟಿ ನಿಂತ ಪಿಕೆಟಿಂಗ್ : ಗಾಜನೂರಿನ ಸಹಾಯಕ ಇಂಜಿನಿಯರ್ ಕಛೇರಿಯ ಮುಂಭಾಗದಲ್ಲಿ ಹಾರ ಹಾಕಿ ಅಲಂಕೃತವಾದ ಗಾಂಧೀಜಿ ಅವರ ಭಾವ ಚಿತ್ರ ಮುಂದಿಟ್ಟುಕೊಂಡು ಕಚೇರಿಗೆ ಅಡ್ಡ ಕುಳಿತ ಹಸಿರು ಟೋಪಿಯ ರೈತ ಚಳವಳಿಗಾರರು, ಅವರನ್ನು ಸುತ್ತುಗಟ್ಟಿ ನಿಂತ ನೂರಾರು ಮಹಿಳೆಯರು, ಮಕ್ಕಳು, ಮುದುಕರು.

ಮಧ್ಯ ಭಾಗದಲ್ಲಿ ಹಂಚ್ಚಪ್ಪನ ಮಗ 6ನೇ ತರಗತಿಯಲ್ಲಿ ಓದುವ ಹೈದ, ತಲೆಗೆ ಹಸಿರು ಬಟ್ಟೆ ಸುತ್ತಿಕೊಂಡು ಕುಣಿಯುತ್ತಿದ್ದ. ಹನ್ನೊಂದು ಮಕ್ಕಳ ತಂದೆ ಹರಿಜನ ಪುಟ್ಟಪ್ಪ ತಮಟೆ ಬಾರಿಸುತ್ತಿದ್ದ.

ಯಾರೋ ಬಂದು, ಕುಣಿಯುತ್ತಿದ್ದ ಹೈದನಿಗೆ, ತಮಟೆ ಭಾರಿಸುತ್ತಿದ್ದ ಪುಟ್ಟಪ್ಪನಿಗೆ ಹಾರ ಹಾಕಿದರು. ಹುಡುಗ ಮತ್ತೆ ಹೆಜ್ಜೆ ಹಾಕಲಾರಂಭಿಸಿದ.

ರೋಮಾಂಚನ : ಅರವತ್ತು ವರ್ಷದ ಹರಿಜನ ಪುಟ್ಟಪ್ಪನ ಕೊರಳಿಗೆ ಹಾರ ಬಿದ್ದದ್ದು ಜೀವನದಲ್ಲಿ ಇದೇ ಪ್ರಥಮ ಭಾರಿ. ಅದೂ ಮೇಲ್ಜಾತಿಯವರ ಕೈಯಿಂದ, ಪುಟ್ಟಪ್ಪನ ಹತ್ತಿರ ಬಂದು ಮೈಮುಟ್ಟಿ ಅಭಿಮಾನದಿಂದ ಮೇಲ್ಜಾತಿಯ

ವರೊಬ್ಬರು ಹಾರ ಹಾಕಿದಾಗ ಪುಟ್ಟಪ್ಪನಿಗೆ ರೋಮಾಂಚನ. ರವಿಯ ತಂದೆ ಹುಚ್ಚಪ್ಪ ಮೊನ್ನೆಯೇ ಜೈಲಿಗೆ ಹೋಗಿದ್ದು, ರವಿಯ ಅಜ್ಜಿ ಹುಡುಗನ ವಸ್ತ್ರ ಸರಿಪಡಿಸುತ್ತಿತ್ತು. ಜನ ಮೆಚ್ಚುಗೆಯಿಂದ ತಲೆ ತೂಗುತ್ತಿದ್ದರು.

ಕಚೇರಿ ಅಡ್ಡಗಟ್ಟಿ ಕುಳಿತವರೆಲ್ಲರಿಗೂ ಹಾರ ಹಾಕಲಾಯಿತು. ಅವರಲ್ಲಿ ಹರಿಜನರ ಗಂಗಮ್ಮನ ಮಗ ಸವರಪ್ಪನೂ ಕುಳಿತಿದ್ದಾನೆ. ಮೇಲ್ಜಾತಿಯವರ ಜೊತೆಯಲ್ಲಿಯೇ ಮೈಗೆ ಮೈ ತಾಗಿಸಿ ಸವರಪ್ಪ ಕುಳಿತಿರುವುದು ಗಂಗಮ್ಮನಿಗೆ ಎಲ್ಲಿಲ್ಲದ ಹಿಗ್ಗು.

ಇಡ್ಲಿ ಕಾಫಿ ; ತುಸು ಹೊತ್ತಿನಲ್ಲಿಯೇ ಸತ್ಯಾಗ್ರಹಿಗಳಿಗೆಲ್ಲಾ ಬಿಸಿ ಬಿಸಿ ಇಡ್ಲಿ ಮತ್ತು ಸ್ಟೀಲ್ ಕಪ್‌ನಲ್ಲಿ ಕಾಫಿ. ಸವರಪ್ಪನಿಗೂ ಅದೇ ಮರ್ಯಾದೆ.

ರೈತ ಚಳವಳಿಯಲ್ಲಿ ಪೂರ್ಣವಾಗಿ ಭಾಗವಹಿಸಿರುವ ಈ ಊರಿನಲ್ಲಿ ಈಗ ಜಾತೀಯ ಭಾವನೆ ಮರೆಯಾಗಿದೆ. ಜೈಲಿಗೆ ಹೋಗುವ ಹುಮ್ಮಸ್ಸಿನಲ್ಲಿ ಮತ್ತು ಸರ್ಕಾರದ ವಿರುದ್ಧ ಸಾರಿರುವ ಸಮರದಲ್ಲಿ ತಾವೆಲ್ಲಾ ಒಂದು ಎಂಬ ಭಾವನೆ ಈ ಜನರಲ್ಲಿ ಈಗ ಮೂಡಿದೆ.

ಗಂಗಮ್ಮನಿಗೆ ಭೂಮಿಯಿಲ್ಲ. ನಿತ್ಯಕೂಲಿಯಿಂದಲೇ ಇವರ ಬದಕು. ನಾಲ್ಕು ಮಕ್ಕಳ ತಾಯಿ. ರೈತರ ಹೋರಾಟದಲ್ಲಿ ಭೂಮಿಯಿಲ್ಲದೆ ನೀನೇಕೆ ಭಾಗವಹಿಸ ಬೇಕು ? ಎಂದು ಪ್ರಶ್ನಿಸಿದಾಗ, ಗಂಗಮ್ಮ "ಊರಿನವರು ಬ್ಯಾರೇ ಅಲ್ಲ. ನಾವು ಬ್ಯಾರೇ ಅಲ್ಲ. ಅವರಿಗೆ ಒಳ್ಳೇದಾದರೆ ನಮಗೂ ಒಳ್ಳೆಯದಾಗುತ್ತೆ, ಹೆಚ್ಚು ಕೂಲೀನೂ ಸಿಕ್ಕುತ್ತೆ" ಎಂದು ಉತ್ತರಿಸಿದಳು.

ಪ್ರಥಮ ಭಾರಿಗೆ : ರೈತ ಮುಖಂಡ ಸವರಪ್ಪ ಅವರ ಪ್ರಕಾರ ಕಳೆದ 30 ವರ್ಷಗಳಲ್ಲಿ ಈ ಊರು ಎಲ್ಲಾ ವೈಷಮ್ಯಗಳನ್ನು ಮರೆತು ಒಂದಾಗಿದೆ.

ಸುಮಾರು 200ಕ್ಕೂ ಹೆಚ್ಚು ಮಂದಿ ಮಹಿಳೆಯರು ಸೇರಿದ್ದ ಗುಂಪಿನಲ್ಲಿ ಕರಿಯಮ್ಮ, ದುರುಗಮ್ಮ. ಗಂಗಮ್ಮ, ರುದ್ರಮ್ಮ ತಮ್ಮ ದುಃಖ ತೋಗಿ ಕೊಂಡರು. ತಮ್ಮ ಗಂಡಂದಿರು, ಮಕ್ಕಳು ಜೈಲಿಗೆ ಹೋದ ಮೇಲೆ ನಾವೇಕೆ ಊರಲ್ಲಿರುವುದು. ನಾವೂ ಜೈಲಿಗೆ ಹೋಗುತ್ತೇವೆ ನಮ್ಮ ದನ ಕರುಗಳನ್ನೂ ಹೊಡೆದು ಹೋಗುತ್ತೇವೆ ಎಾದು ಉತ್ಸಾಹದಿಂದ ಹೇಳಿದರು.

ಹೆದರಿಕೆಯಿಲ್ಲ : ಪೋಲೀಸರಲ್ಲಾ ಸರ್ಕಾರಾನೇ ಬರಲಿ; ನಾವು ಹೆದ್ರೊಲ್ಲ, ನಮಗೆ ವಿಷ ಕೊಡಲಿ ಕುಡೀತೀವಿ ಎಂದು ಒಬ್ಬರೆಂದರೆ, ಕರಿಯಮ್ಮ ನೋಡಪ್ಪಾ, ನಮಗೆಲ್ಲಾ 10 ರೂ. ಸೀರೆ ಅವರಿಗೆಲ್ಲಾ 100 ರೂ. ಸೀರೆ ಎಂದು ತನ್ನ ಸೀರೆ ತೋರಿಸಿದರು.

"ಬೇಸಾಯ. ನೀಸಾಯ ನಿಮ್ಮಪ್ಪ ಸಾಯ ಅನ್ನೊದನ್ನ ಕೇಳಿಲ್ವಾ" ಅಂದಳು ದುರ್ಗಮ್ಮ.

"ನೀವೆಲ್ಲಾ ಇಂದಿರಾಗಾಂಧಿಗೆ ಓಟು ಹಾಕಿದ್ರಿಲ್ಲವೆ ?" ಎಂದು ಪ್ರಶ್ನಿಸಿದಾಗ ಎಲ್ಲರೂ ಏಕಕಂಠದಲ್ಲಿ "ಅವಳ ಮನೆ ಹಾಳಾಗ. ಮತ್ತೆ ಬರಲಿ ಬುದ್ದಿ ಕಲಿಸ್ತೀವಿ" ಅಂದರು.

ಅಂತೂ ಗಾಜನೂರಿನ ಯಾವ ಕಚೇರಿಗಳೂ ಇಂದು ಕೆಲಸ ಮಾಡಲಿಲ್ಲ.

ನಿಂತ ಪೈರಿನ ಚಿಂತೆ : ಶಿವಮೊಗ್ಗ, ಅ. 14 : ಬೆಳೆದ ಮಗ ಜೈಲಿಗೆ ಹೋದ, ಬಾಗು ಬೆನ್ನಿನ ತಂದೆ ಚಿಂತಾಕ್ರಾಂತನಾದ; ಕಾರಣ ಹೊಲದಲ್ಲಿ ಬೆಳೆದು ನಿಂತ ಪೈರು.

ಬಸವಾಪಟ್ಟಣದ ಹತ್ತಿರ ಒಂದು ಹಳ್ಳಿಯಲ್ಲಿ ಕಾನೂನು ಭಂಗ ಚಳವಳಿಯಿಂದ ಒಬ್ಬನೆ ಮಗನಿದ್ದ ಕುಟುಂಬದಲ್ಲಿ ತೊಂದರೆಯಾಯಿತು.

ಮುಂಚೆ ಬಿತ್ತಿದ ಬೆಳೆ ಕೊಯಿಲಿಗೆ ಬಂದಿತ್ತು. ಆದರೆ ಕೊಯಿಲು ಮಾಡುವ ಮಗ ಜೈಲಿಗೆ ಹೋಗಿದ್ದ. ಹುಡುಗನ ತಂದೆ ಮುದುಕ, ಜೊತೆಗೆ ಬಡವ, ಊರು ಮುಂದಾಯಿತು. ಕೊಯಿಲ ಕೆಲಸ ಕೆಲವೇ ಗಂಟೆಗಳಲ್ಲಿ ಮುಗಿದು ಹೋಯಿತು. ಮುದುಕ ಸಮಾಧಾನದಿಂದ ಉಸಿರಾಡಿದ.

ಭಾಗ ೪

ಒಳನೋಟ

ಮಲೆನಾಡಿನ ಸಮೃದ್ಧ ಅರಣ್ಯ ಸಂಪತ್ತನ್ನು, ಹುಲುಸಾಗಿ ಬೆಳೆದ ಭತ್ತದ ಗದ್ದೆಗಳನ್ನು, ಮೋಪಾಗಿ ಬೆಳೆದ ಕಬ್ಬಿನ ಹೊಲಗಳನ್ನು, ಅಲ್ಲಲ್ಲಿ ಕಾಣಸಿಗುವ ತಂಬಾಕಿನ ಬೆಳೆಯನ್ನು, ತೆಂಗು – ಅಡಿಕೆಗಳ ತೋಟಗಳನ್ನು ಕಂಡು ಈ ಜಿಲ್ಲೆ ಶ್ರೀಮಂತರ ಜಿಲ್ಲೆ, ದೊಡ್ಡ ರೈತರ ಜಿಲ್ಲೆ ಎಂದು ಯಾರಾದರೂ ತೀರ್ಮಾನಕ್ಕೆ ಬಂದರೆ ತಪ್ಪಾಗುತ್ತದೆ. ಯಾಕೆಂದರೆ ವಾಸ್ತವವೇ ಬೇರೆ. ಸರ್ಕಾರದ ಅಂಕಿ ಅಂಶದ ಪ್ರಕಾರ ಈ ಜಿಲ್ಲೆಯುಲ್ಲಿರುವ ರೈತರ ವಿವರ ಹೀಗಿದೆ :

ಒಂದು ಹೆಕ್ಟೇರಿಗಿಂತ ಕಡಿಮೆ ಭೂಮಿ ಇರುವ ರೈತರು	:	53,559
1 ರಿಂದ 2 ಹೆಕ್ಟೇರ್ ಭೂಮಿ ಹೊಂದಿರುವ ರೈತರು	:	43,967
2 ರಿಂದ 4 ಹೆಕ್ಟೇರ್ ಭೂಮಿಯ ಒಡೆಯರು	:	33,189

4 ರಿಂದ 10 ಹೆಕ್ಟೇರ್ ಭೂಮಿಯ ಒಡೆಯರು	:	17,779
10 ಹೆಕ್ಟೇರಿಗಿಂತ ಹೆಚ್ಚು ಭೂಮಿ ಹೊಂದಿರುವವರು	:	3,159

ಬಾಗಾಯ್ತು ಹೊಂದಿರುವವರ ವಾರ್ಷಿಕ ಆದಾಯ ತುಂಬ ಹೆಚ್ಚಿರುತ್ತದೆ. ಅವರಲ್ಲಿ 7 ಹೆಕ್ಟೇರಿಗಿಂತ ಹೆಚ್ಚು ಭೂಮಿ ಹೊಂದಿದವರೆಲ್ಲ ಸಾಮಾನ್ಯವಾಗಿ ಶ್ರೀಮಂತರೆಂದೇ ಪರಿಗಣಿಸಲ್ಪಡುತ್ತಾರೆ. ಉಳಿದವರನ್ನು ವರ್ಗೀಕರಿಸುವುದಾದರೆ ನಾಲ್ಕರಿಂದ ಹತ್ತು ಹೆಕ್ಟೇರಿಗಿಂತ ಹೆಚ್ಚು ಭೂಮಿಯನ್ನು ಹೊಂದಿರುವ ರೈತರೆಲ್ಲರನ್ನು ಶ್ರೀಮಂತ ರೈತರೆಂದು ಪರಿಗಣಿಸಬೇಕಾಗುತ್ತದೆ. ಈ ಜಿಲ್ಲೆಯಲ್ಲಿ ಶ್ರೀಮಂತ ರೈತರೆನ್ನುವವರು ಇಲ್ಲ. ದೊಡ್ಡ ರೈತರಿಗೆ ದೊಡ್ಡ ಸಾಲ, ಸಣ್ಣ ರೈತರಿಗೆ ಸಣ್ಣ ಸಾಲ ಎಂದೂ, ರೈತರೆಲ್ಲ ಸಾಲಗಾರರು ಎಂದೂ ವಾದಿಸುತ್ತಾರೆ. ತಮ್ಮ ವಾದ ಸಮರ್ಥಿಸಿಕೊಳ್ಳಲು ಅಂಕಿ-ಅಂಶಗಳಿರುತ್ತವೆ. ಆದರೆ ಈ ಶ್ರೀಮಂತ ರೈತರು ಸಾಮಾನ್ಯವಾಗಿ ಮಂಡಿ ವರ್ತಕರು, ಅಕ್ಕಿ, ವ್ಯಾಪಾರಿಗಳು, ರೈಸ್‌ಮಿಲ್ ಮಾಲಿಕರು ಮತ್ತು ಲೇವಾದೇವಿಗಾರರಾಗಿರುತ್ತಾರೆ. ಇದೇನೇ ಇದ್ದರೂ ಈ ಜಿಲ್ಲೆಯಲ್ಲಿ ಚಿಕ್ಕ ರೈತರ ಮತ್ತು ಭೂಮಿ ಇಲ್ಲದ ಗೇಣಿದಾರರ ಹಾಗೂ ಕೃಷಿ ಕಾರ್ಮಿಕರ ಸಂಖ್ಯೆ ಬಹಳ ದೊಡ್ಡದಾಗಿಯೇ ಇದೆ.

ದೊಡ್ಡ ರೈತರ ಚಳವಳಿಯೇ ? : ಮಲೆನಾಡ ರೈತರ ಚಳವಳಿ ಎಂಬ ಮಾತು ಮೊದಲಿನಿಂದಲೂ ಕೇಳಿ ಬರುತ್ತಿದೆ. ಇದಕ್ಕೆ ಬಹುಶಃ ಮಧ್ಯಮ ವರ್ಗದ ಮತ್ತು ಶ್ರೀಮಂತ ವರ್ಗದ ರೈತ ಮುಖಂಡರು ಚಳವಳಿಯ ನೇತೃತ್ವ ವಹಿಸಿದುದೇ ಕಾರಣವೆನಿಸುತ್ತದೆ. ಮೊದಲಿನಿಂದಲೂ ಸಂಘಟನೆಯನ್ನಿಟ್ಟುಕೊಂಡಿದ್ದ ಕಬ್ಬು ಬೆಳೆಗಾರರ ಸಂಘ ಮತ್ತು ಶಿವಮೊಗ್ಗ ಜಿಲ್ಲಾ ರೈತ ಸಂಘಗಳ ಮುಖಂಡರು ಈ ಚಳವಳಿಯಲ್ಲಿ ಮುಖಂಡತ್ವ ವಹಿಸುವುದು ಅನಿವಾರ್ಯವಾಗಿತ್ತು. ಈ ಎರಡೂ ಸಂಘಗಳು ಶ್ರೀಮಂತ ರೈತರ ಸಂಘಗಳೆಂದಾಗಲಿ ಅಥವಾ ಇಲ್ಲಿರುವವರೆಲ್ಲರೂ ಶ್ರೀಮಂತರು ಎಂದಾಗಲಿ ಹೇಳುವುದು ಬಾಲಿಶವಾಗುತ್ತದೆ. ಆದರೆ ಶ್ರೀಮಂತರು ಈ ಸಂಘದಲ್ಲಿದ್ದರು ಎಂಬುವನ್ನು ಅಲ್ಲಗಳೆಯಲು ಬರುವುದಿಲ್ಲ. ಜೊತೆಗೆ ಈ ಸಂಘದಲ್ಲಿ ವಿದ್ಯಾವಂತರು, ಪದವೀಧರರು, ರಾಜಕೀಯದ ಆಗು-ಹೋಗುಗಳನ್ನು ಬಲ್ಲವರು, ಹೋರಾಟಗಳಲ್ಲಿ ಭಾಗವಹಿಸುವಂಥವರು, ಸಂಘಟನೆಗಾಗಿ ತಿಂಗಳುಗಟ್ಟಲೆ ತಮ್ಮ ಮನೆಗೆಲಸಗಳನ್ನು ಬಿಟ್ಟು ಹಳ್ಳಿಹಳ್ಳಿಯಲ್ಲಿ ಸುತ್ತುವಂತ ಶಕ್ತಿಯುಳ್ಳವರು ಈ ಸಂಘದಲ್ಲಿದ್ದರು. ಜನರೊಂದಿಗೆ ನಿಕಟ ಸಂಪರ್ಕವೂ ಕೆಲವರಿಗಿದ್ದಿತು. ನರಗುಂದ ನಡೆದ ಕೂಡಲೇ ಇವರೆಲ್ಲ ಮುಂದಾಗಿ ರೈತ ಸಂಘಟನೆಗೆ ತೊಡಗಿದ್ದು ಸಹಜವಾಗಿಯೇ ಇತ್ತು. ಆದರೆ ದೊಡ್ಡ ರೈತರ ಒಲವು ಪ್ರಕಟವಾದದ್ದು ಹುಬ್ಬಳ್ಳಿಯಲ್ಲಿ

ಆಗಸ್ಟ್ (1980) 11 ರಂದು ನಡೆದ ಆರು ಜಿಲ್ಲೆಗಳ ರೈತ ಸಮನ್ವಯ ಸಮಿತಿ ಸಿದ್ಧಪಡಿಸಿದ 19 ಬೇಡಿಕೆಗಳ ಪಟ್ಟಿ ಹೊರಬಂದಾಗ. ಈ ಬೇಡಿಕೆಗಳಲ್ಲಿ ಸಣ್ಣ ರೈತರಿಗೆ, ಗೇಣಿದಾರರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಅನುಕೂಲವಾಗುವ ಬೇಡಿಕೆಗಳು ಹೆಚ್ಚಾಗಿ ಇರಲಿಲ್ಲ. ಇದ್ದ ಬೇಡಿಕೆಗಳಲ್ಲಿ ಸರ್ಕಾರ ಕೆಲವು ಸುಲಭವಾಗಿಒಪ್ಪಿಕೊಳ್ಳುವಂತಿರಲಿಲ್ಲ. ಇನ್ನು ಕೆಲವು 'ಬೇಡಿಕೆಗಳು ಬೇಡಿಕೆಗಳಿಗಾಗಿ ಬೇಡಿಕೆಗಳು' ಎಂಬಂತಿದ್ದವು. ರೈತ ಸಮನ್ವಯ ಸಮಿತಿ ಮತ್ತೊಂದು ಜಾಣತನವನ್ನು ಮಾಡಿತು. ಈ 19 ಬೇಡಿಕೆಗಳ ಜೊತೆಗೆ ಸ್ಥಳೀಯ ಬೇಡಿಕೆಗಳನ್ನೂ ಇರಿಸಿಕೊಂಡು ಹೋರಾಟ ನಡೆಸಬೇಕೆಂದು ಆದೇಶ ನೀಡಿತು. ಆದರೆ ರೈತ ಮುಖಂಡರು (ಜಿಲ್ಲೆಯ) ಸ್ಥಳೀಯ ಬೇಡಿಕೆಗಳಿಗೆ ಹೆಚ್ಚಿನ ಗಮನ ಕೊಡಲಿಲ್ಲ. ಸಾಗರ, ಶಿಕಾರಿಪುರ ಮೊದಲಾದ ಕಡೆಗಳ ರೈತ ಕ್ರಿಯಾಸಮಿತಿಗಳು ಮಾತ್ರ ಸ್ಥಳೀಯ ಬೇಡಿಕೆಗಳ ಪಟ್ಟಿ ತಯಾರಿಸಿದವು. ಉಳಿದ ಕಡೆ ಆ ಪಟ್ಟಿಗಳೂ ಹೊರ ಬರಲಿಲ್ಲ. ರೈತ ಮುಖಂಡರೂ ಆ ಕಡೆಗೆ ಹೆಚ್ಚಿನ ಗಮನ ಕೊಡಲಿಲ್ಲ. ಹೀಗಾಗಿ ರೈತರ ಚಳವಳಿಯ ಮುಖ್ಯ ಗಮನ ಈ 19 ಬೇಡಿಕೆಗಳ ಮೇಲೆಯೇ ಕೇಂದ್ರೀಕೃತವಾಗಿತ್ತು. ಹೇಗಾದರೂ ಚಳವಳಿಯನ್ನು ಶಮನ ಮಾಡಲು ಉದ್ದೇಶಿಸಿದ ಸರ್ಕಾರವೂ ಸ್ಥಳೀಯ ಬೇಡಿಕೆಗಳಿಗೆ ಗಮನ ಕೊಡಲಿಲ್ಲ.

ಜೈಲಿಗೆ ಹೋದವರು ಯಾರು ? : ದೊಡ್ಡ ರೈತರೆಲ್ಲ ತಮ್ಮ ಹಿತಕ್ಕೆ ಚಳವಳಿ ಆರಂಭಿಸಿದರು. ಜೈಲಿಗೆ ಹೋದವರೆಲ್ಲ ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರು ಎಂದು ಟೀಕಿಸಿದವರೂ ಉಂಟು. ಜೈಲಿಗೆ ಹೋದವರ ಅಂಕಿ-ಅಂಶಗಳನ್ನು ವಿವರಗಳನ್ನು ಗಮನಿಸಿದರೆ ಸಣ್ಣ ರೈತರ ಮತ್ತು ಕೃಷಿ ಕಾರ್ಮಿಕರ ಸಂಖ್ಯೆಯೇ ದೊಡ್ಡದಾಗುತ್ತದೆ. ಇದು ಉದ್ದೇಶಪೂರ್ವಕವಾಗಿ ನಡೆದುದಲ್ಲ. ಪಟ್ಟಣ ಪ್ರದೇಶಗಳಲ್ಲಿ ಇಂಥ ಮಾತುಗಳಾಡಿದರೂ ಹಳ್ಳಿಗಳಲ್ಲಿ ರೈತ ಚಳವಳಿ ಎಲ್ಲ ರೈತರ ಚಳವಳಿಯಾಗಿತ್ತು. ಮನೆಗೊಬ್ಬನಂತೆ ಹಳ್ಳಿಗಳಲ್ಲಿ ಜೈಲುಗಳಿಗೆ ಸತ್ಯಾಗ್ರಹಿಗಳನ್ನು ಕಳುಹಿಸಲಾಗುತ್ತಿತ್ತು. ಒಂದು ಹಳ್ಳಿಗೆ ಬೆರಳೆಣಿಕೆಗೆ ಸಿಗುವಷ್ಟು ಶ್ರೀಮಂತ ರೈತರು ಇರುವ ಕಾರಣ ಅವರ ಸಂಖ್ಯೆ ಕಡಿಮೆಯಾದುದಕ್ಕೆ ಆಶ್ಚರ್ಯ ಪಡಬೇಕಿಲ್ಲ. ಇನ್ನು ಕೃಷಿ ಕಾರ್ಮಿಕರು ಜೈಲಿಗೆ ಹೋದದ್ದೇಕೆ ? ಅವರಿಗೇನು ಲಾಭ ? ಎಂಬ ಪ್ರಶ್ನೆಯೂ ಬರುತ್ತದೆ. ಅನೇಕ ಹಳ್ಳಿಗಳಲ್ಲಿ ನಿರ್ಣಯ ತೆಗೆದುಕೊಳ್ಳುವವರು ಊರಿಗೆ ಆದದ್ದು ನಮಗೂ ಆಗುತ್ತದೆ ಎನ್ನುವ ಜನರೇ ಜಾಸ್ತಿ ಇರುವ ನಮ್ಮ ಹಳ್ಳಿಗಳಲ್ಲಿ ಅನೇಕರು ಜೈಲಿಗೆ ಹೋಗುವ ಸ್ಪಷ್ಟ ಕಾರಣಗಳನ್ನು ತಿಳಿದುಕೊಳ್ಳಲಿಲ್ಲ. ಇನ್ನು ಅನೇಕರಿಗೆ ಹಳ್ಳಿಗಳಲ್ಲಿ ಕೃಷಿ ಕಾರ್ಯವಿಲ್ಲದೆ, ಕೂಲಿಗಳು ಸಿಗದಂತಾಗಿ ಮನೆ

ಯಲ್ಲಿರಬೇಕಾದ ಪರಿಸ್ಥಿತಿ ಇತ್ತು. ಜೊತೆಗೆ ಊರಿಗೆ ಊರೇ ಎದ್ದು ಕುಣಿಯುವಾಗ ಸುಮ್ಮನಿರಲು ಸಾಧ್ಯವೇ ? ಕೃಷಿ ಕಾರ್ಮಿಕರು ಹೆಚ್ಚು ಸಂಖ್ಯೆಯಲ್ಲಿ ಜೈಲಿಗೆ ಹೋಗಲು ಇನ್ನೂ ಒಂದು ಮುಖ್ಯ ಕಾರಣವಿತ್ತು. ಈ ಹಳ್ಳಿಗಳಲ್ಲಿದ್ದ ವೈಷಮ್ಯ ಗಳು ತಾತ್ಕಾಲಿಕವಾಗಿಯಾದರೂ ಮಾಯುವಾಗಿದ್ದವು. ವರ್ಗ ಮತ್ತು ಜಾತಿ ಭೇದ ಗಳನ್ನೂ ಅನೇಕ ಹಳ್ಳಿಗಳಲ್ಲಿ ಮರೆಯಲಾಗಿತ್ತು. ಚಳವಳಿಗೆ ಹೋಗುವವರ ಬಡ ಕುಟುಂಬಗಳಿಗೆ ನೆರವಾಗಲೂ ಮಧ್ಯಮ ವರ್ಗದವರು ಮುಂದಾಗಿದ್ದರು. ಕಾಳು–ಕಡ್ಡಿ, ಹಣ ಇತ್ಯಾದಿಗಳ ಮೂಲಕ ನೆರವು ದೊರೆತು ಒಂದು ಹೊಸ ಬಗೆಯ ವಾತಾ ವರಣ ಮೂಡಿತ್ತು. ಸತ್ಯಾಗ್ರಹಕ್ಕೆ ಹೋಗುವ ಹರಿಜನರಿಗೆ ಹಾರಗಳನ್ನು ಹಾಕುವ, ಎಲ್ಲ ಸತ್ಯಾಗ್ರಹಿಗಳ ಜೊತೆಯಲ್ಲೂ ಕೂಡಿಸಿ ತಿಂಡಿ ಕೊಡುವ, ಗೌರವ ದಿಂದ ಕಾಣುವ, ಮನೋಭಾವಗಳೂ ಮೇಲ್ಜಾತಿಯವರಲ್ಲಿ, ಮೇಲ್ವರ್ಗದವರಲ್ಲಿ ಕಾಣಿಸಿಕೊಂಡವು. ಇನ್ನೂ ಅನೇಕ ಊರುಗಳಲ್ಲಿ ಜೈಲಿಗೆ ಹೋಗುವುದು ಗೌರವದ ಪ್ರಶ್ನೆಯಾಗಿತ್ತು. ಪೋಲೀಸು, ಜೈಲು ಅಧಿಕಾರಿಗಳು, ಸಮವಸ್ತ್ರಗಳು, ಕಚೇರಿ ಗಳು ಎಂದರೇ ನಡುಗುವ ಅನೇಕ ಮುಗ್ಧರಿಗೆ ಗುಂಪಿನಲ್ಲಾದರೂ ಜೈಲುಗಳಿಗೆ ಹೋಗಿ ಬರುವ ಆಸೆ ಉಂಟಾಗಿತ್ತು. ತಮ್ಮ ಅನೇಕ ವರ್ಷಗಳ ಬಡತನದ ಬದುಕು, ಅದಕ್ಕೆ ಕಾರಣವಾದ ರಾಜಕಾರಣಿಗಳು. ಸರ್ಕಾರಗಳು ಹೀಗೆ ಒಳಗೇ ಕುದಿಯುತ್ತಿದ್ದ ಸಹಜ ಕೋಪಕ್ಕೆ ಈ ಚಳವಳಿ ಒಂದು ಹೊರದಾರಿಯಾಗಿತ್ತು. ಇನ್ನೂ ಕೆಲವು ಊರುಗಳಲ್ಲಿ ಸ್ಥಳೀಯ ರಾಜಕೀಯ ಪುಢಾರಿಗಳ (ತಾಲ್ಲೂಕು ಬೋರ್ಡ್ ಸದಸ್ಯರಿರ ಬಹುದು, ಗಂಟು ಮುಳುಗಿಸಿದ ಸೊಸೈಟಿ ಸದಸ್ಯರಿರಬಹುದು) ವಿರುದ್ಧ ಈ ರೈತ ಚಳವಳಿ ತಿರುಗಿತ್ತು. ಇಂಥವರಿಂದ ನೊಂದ ಬಡವರು, ಕೃಷಿಕರು ತಾವೇ ತಾವಾಗಿ ಚಳವಳಿಯಲ್ಲಿ ಧುಮುಕಿದ್ದರು. ಹೀಗಾಗಿ ಇವರೆಲ್ಲ ಜೈಲಿಗೆ ಹೋಗಿದ್ದರು.

ಮುಖಂಡರ ತಪ್ಪು ಹೆಜ್ಜೆಗಳು : ಚಳವಳಿಯನ್ನೇನೋ ಈ ಮುಖಂಡರು ಆರಂಭಿಸಿದ್ದರು. (ರಸ್ತೆ ಸತ್ಯಾಗ್ರಹ) ಆದರೆ ಅದಕ್ಕೆ ಅಗತ್ಯವಾದ ರಂಗ ತಾಲೀ ಮನ್ನು ಮಾಡಿರಲಿಲ್ಲ. ವ್ಯವಸ್ಥಿತ ರೀತಿಯಲ್ಲಿ ಜಿಲ್ಲೆಯಾದ್ಯಂತ ರೈತ ಸಂಘಟನೆ ಇನ್ನೂ ನಡೆಯಬೇಕಿತ್ತು. ಯಾಕೆಂದರೆ ಚಳವಳಿ ಉಗ್ರಸ್ವರೂಪ ಪಡೆದುಕೊಂಡಾಗ ರೈತ ಮುಖಂಡರು ತೀರ ಗಾಬರಿಗೊಂಡಂತೆ ನಡೆದುಕೊಂಡರು. (ಚಳವಳಿ ನಿಲ್ಲಿಸುವ ಸಂದರ್ಭದಲ್ಲಿ) ಸಂಘಟನೆ ಹೆಚ್ಚು ವ್ಯವಸ್ಥಿತವಾದಷ್ಟೂ ನಿಯಂತ್ರಿಸುವುದು ಸುಲಭ ವಾಗುತ್ತದೆ. ಚಳವಳಿ ಇಡೀ ಜಿಲ್ಲೆಯನ್ನು ವ್ಯಾಪಿಸಿತ್ತಾದರೂ ಕೆಲವು ತಾಲ್ಲೂಕು ಗಳಲ್ಲಿ ಕೇವಲ ಸಾಂಕೇತಿಕವಾಗಿ ಚಳವಳಿ ನಡೆದುದನ್ನು ಗಮನಿಸಿದರೆ ಸಂಘಟನೆಯ ಕೊರತೆ ಕಂಡು ಬರುತ್ತದೆ.

ಈ ಸಂಘಟನೆ ಹೆಚ್ಚು ಶಿಸ್ತಿನಿಂದ ನಡೆದಿದ್ದರೆ ಮತ್ತು ಚಳವಳಿಯನ್ನು ನಡೆಸಿಕೊಂಡು ಹೋಗಲು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಸೇವಕರಿದ್ದಿದ್ದರೆ ಸಮಾಜಘಾತುಕ ಶಕ್ತಿಗಳು ಹಾಗೂ ಚಳವಳಿಯನ್ನು ಕೆಡಿಸಲೆಂದೇ ಹೊರಟ ರಾಜಕಾರಣಿಗಳ ಬಾಡಿಗೆ ವ್ಯಕ್ತಿಗಳು (ಅಲ್ಲಲ್ಲಿ ಸಣ್ಣಪುಟ್ಟ ಗಲಭೆಗಳನ್ನು ನಡೆಸಿದರು) ಚಳವಳಿಯ ಒಳಗೆ ನುಸುಳದಂತೆ ತಡೆಯಬಹುದಿತ್ತು.

ಈ ಮುಖಂಡರು ಮಾಡಿದ ಮತ್ತೊಂದು ಪ್ರಮುಖ ತಪ್ಪೆಂದರೆ ಸರ್ಕಾರದೊಂದಿಗೆ ಅಧಿಕಾರಿಗಳ ಜೊತೆ ನಡೆದುಕೊಂಡ ರೀತಿ. ಆರಂಭದಲ್ಲಿ ತುಂಬ ಬಿಗುವಾದ ಧೋರಣೆಯನ್ನೇ ತಳೆದಿದ್ದ ಇವರು ನಿಧಾನಕ್ಕೆ, ಅಧಿಕಾರಿಗಳು, ಮಂತ್ರಿಗಳು, ಶಾಸಕರು, ರಾಜಕಾರಣಿಗಳು ಮೇಲಿಂದ ಮೇಲೆ ಶಿವಮೊಗ್ಗೆಗೆ ಧಾಳಿ ಇಟ್ಟಾಗ ಸ್ವಲ್ಪ ಸಡಿಲವಾದರು, ಮೃದುವಾದರು.

ರಸ್ತೆ ಸತ್ಯಾಗ್ರಹ ಆರಂಭವಾದ ಒಂದೆರಡು ದಿನಗಳಲ್ಲಿ ಸಚಿವರೊಬ್ಬರು ಶಿವಮೊಗ್ಗೆಗೆ ಬಂದಾಗ, ರೈತ ಮುಖಂಡರು ಅವರಿಗೆ ಅಷ್ಟಾಗಿ ಬೆಲೆಕೊಡದೆ ತಕ್ಕ ಉತ್ತರ ನೀಡಿದ್ದರು. ಮಾತುಕತೆ ಎಂದರೆ ರೈತರ ಬೇಡಿಕೆಗಳ ಚರ್ಚೆ, ಇದಕ್ಕೆ ರಾಜ್ಯ ಸಮನ್ವಯ ಸಮಿತಿಯ ಎಲ್ಲರನ್ನೂ ಕರೆಯಿರಿ. ಇವು ನಮ್ಮೆಲ್ಲರ ಬೇಡಿಕೆಗಳು ಎಂದು ಉತ್ತರ ನೀಡಿದ್ದರು. ಆದರೆ ಈ ಬಿಗುವು ಕೊನೆಯವರೆಗೂ ಉಳಿಯಲೇ ಇಲ್ಲ.

ಸರ್ಕಾರ ಎಚ್ಚೆತ್ತುಕೊಂಡಿತ್ತು. ಚಳವಳಿಯನ್ನು ಮುರಿಯಲು ಯಾವ ದಾರಿಯನ್ನಾದರೂ ನಡೆಯಲು ಸಿದ್ಧವಿತ್ತು. ಮುಖಂಡರಿಗೆ ಆಮಿಷ ತೋರಿಸಿಯಾಗಲಿ ಅಥವಾ ರೈತರಲ್ಲಿ ಒಡಕು ತಂದಾಗಲಿ ಸತ್ಯಾಗ್ರಹ ಕೊನೆಗೊಳ್ಳುವಂತೆ ಮಾಡಲು ಯೋಚಿಸುತ್ತಿತ್ತು. ಹೀಗಾಗಿ ಮೇಲಿಂದ ಮೇಲೆ ಅಧಿಕಾರಿಗಳು, ಮಂತ್ರಿಗಳು ರೈತ ಮುಖಂಡರನ್ನು ಹುಡುಕಿಕೊಂಡು ಬರುತ್ತಲೇ ಇದ್ದರು. ರೈತ ಮುಖಂಡರು ತಪ್ಪಿದ್ದು ಇಲ್ಲಿಯೇ. ಬಂದ ಸರ್ಕಾರದ 'ರಾಯಭಾರಿ'ಗಳ ಜೊತೆ ಗಂಟೆಗಟ್ಟಲೆ ಮಾತನಾಡಲಾರಂಭಿಸಿದ್ದರು. ರಸ್ತೆಗಳ ಸ್ಥಿತಿ–ಗತಿಯನ್ನು ಅಧ್ಯಯನ ಮಾಡಬೇಕು ರೈತರ ಜೊತೆ ಮಾತನಾಡಬೇಕು ಎಂದು ಬಯಸಿದ ಚಾಣಾಕ್ಷ 'ರಾಯಭಾರಿ'ಗಳ ಜೊತೆ (ಇವುಗಳ ಹಿಂದಿನ ಉದ್ದೇಶ ಮರೆತು) ನೂರಾರು ಮೈಲುಗಳನ್ನು ಸುತ್ತಿದರು. ಇದರಿಂದಾಗಿ ಗಾಳಿಮಾತುಗಳು ಕಿವಿಯಿಂದ ಕಿವಿಗೆ ದಾಟಲಾರಂಭಿಸಿದವು. ಮುಖಂಡರು ಹಣ ತಿಂದಿದ್ದಾರೆ, ಚಳವಳಿ ನಿಂತುಹೋಗುತ್ತದೆ, ಎಂಬ ಗುಸುಗುಸು ಸುದ್ದಿಗಳು ಎಲ್ಲೆಡೆಯೂ ಕೇಳಲಾರಂಭಿಸಿದವು. ಇದೇ ಸಂದರ್ಭದಲ್ಲಿ ಮುಖಂಡರು

ತುರ್ತುಸಭೆ ಕರೆದು ಚಳವಳಿಯ ದಿಕ್ಕನ್ನು ಬದಲಾಯಿಸಿದರು. ರಸ್ತೆ ಸತ್ಯಾಗ್ರಹ ನಿಲ್ಲಿಸಿ ಸರ್ಕಾರಿ ಕಚೇರಿಗಳ ಮುಂದೆ ಪಿಕೆಟಿಂಗ್ ನಡೆಸಲು ಕರೆ ನೀಡಿದರು. ಇದು ಅನೇಕರ ಮನಸ್ಸುಗಳಲ್ಲಿಲ್ಲದ್ದು ಅನುಮಾನಕ್ಕೆ ಗಾಳಿ ಹಾಕಿತು. ಮುಖಂಡರನ್ನು ಶಂಕಿಸುವ ಸ್ಥಿತಿಯೂ ಉಂಟಾಯಿತು.

ಮುಂದೆ ಚಳವಳಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಿದ ಸಂದರ್ಭದಲ್ಲೂ ಹೀಗೇಯೇ ಆಯಿತು. ಭದ್ರಾವತಿಯಲ್ಲಿ ಮತೀಯ ಗಲಭೆ ಆರಂಭವಾಗಿತ್ತು, ನಿಜ; ಶಿವಮೊಗ್ಗದಲ್ಲೂ ಗಲಭೆ ನಡೆಯಿತು. ಆದರೆ ಇದರ ಸ್ವರೂಪ ಬೇರೆಯಾಗಿತ್ತು. ಇಂಥ ಅವಕಾಶಕ್ಕೇ ಕಾಯುತ್ತಿದ್ದ ಸರ್ಕಾರದ ಅಧಿಕಾರಿಗಳು ನಿಷೇಧಾಜ್ಞೆ ಹೊರಡಿಸಿದ್ದರು. ಇದನ್ನು ಮನಗಾಣದ ರೈತ ಮುಖಂಡರು ತುರ್ತು ಸಭೆ ಕರೆದು ಚಳವಳಿಯನ್ನು ರದ್ದು ಪಡಿಸಿದರು. ಇದಕ್ಕೆ ಇವರು ನೀಡಿದ ಕಾರಣಗಳೂ ವಿಚಿತ್ರವಾಗಿದ್ದವು. "ಈ ಎರಡು ಅವಳಿ ನಗರಗಳಲ್ಲಿ ಉಂಟಾದ ಪ್ರಕ್ಷುಬ್ಧ ಪರಿಸ್ಥಿತಿ" ಮತ್ತು, "ರೈತ ಸತ್ಯಾಗ್ರಹಿಗಳಿಗೆ ಊಟ–ವಸತಿ ದೊರೆಯದೆ ತೊಂದರೆಯಾಗಿರುವುದು".

ಸರ್ಕಾರದ ವಿರುದ್ಧ ಹೋರಾಟ ನಡೆಸಿದಾಗ, ಬೇಡಿಕೆಗಳು ನ್ಯಾಯಬದ್ಧವಾಗಿದ್ದರೂ ಸರ್ಕಾರ ಸತ್ಯಾಗ್ರಹಿಗಳನ್ನು ಉಪೇಕ್ಷೆಯಿಂದ ಕಾಣುವುದು, ಅವರಿಗೆ ಊಟ ವ್ಯವಸ್ಥೆ ದೊರೆಯದಂತೆ ತೊಂದರೆಗೊಳಪಡಿಸುವುದು, ಚಳವಳಿ ಮುರಿಯಲೆತ್ನಿಸುವುದು ಹೊಸದೇನಲ್ಲ. ಇದನ್ನು ಅರಿಯದೆ ಹೋಗುವುದು ನಾಯಕತ್ವದ ತಪ್ಪಾಗುತ್ತದೆ.

ಒಂದು ವೇಳೆ ಭದ್ರಾವತಿ–ಶಿವಮೊಗ್ಗಗಳಲ್ಲಿ ಪರಿಸ್ಥಿತಿ ತೀರ ಪ್ರಕ್ಷುಬ್ಧಗೊಂಡಿದ್ದರೆ ಈ ಎರಡು ನಗರಗಳಲ್ಲಿ ಅಥವಾ ಈ ಎರಡು ತಾಲ್ಲೂಕುಗಳಲ್ಲಿ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ನಿಲ್ಲಿಸಬಹುದಿತ್ತು. ಜಿಲ್ಲೆಯ ಹೋರಾಟವನ್ನೇ ಸ್ಥಗಿತಗೊಳಿಸುವ ಅಗತ್ಯ ಇರಲಿಲ್ಲ. ಅಲ್ಲದೆ ಹಳ್ಳಿಹಳ್ಳಿಯಲ್ಲೂ ಹೋರಾಟಕ್ಕೆ ಸಿದ್ಧವಾಗುತ್ತಿದ್ದ ಮತ್ತು ಕೆಲವು ಹಳ್ಳಿಗಳು ಆಗತಾನೇ ಆಕಳಿಸಿ ಏಳುತ್ತಿದ್ದ ಸಂದರ್ಭದಲ್ಲಿ ಚಳವಳಿಗೆ ತೆರೆ ಹಾಕುವುದು ಜಾಣತನವಾಗಿರಲಿಲ್ಲ.

ಚಳವಳಿ ನಿಂತ ದಿನ ಈ ಮುಖಂಡರು ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ತುಂಬ ಮೃದುವಾಗಿದ್ದರು. ಸರ್ಕಾರದ ಬಗ್ಗೆ ಅಗತ್ಯಕ್ಕಿಂತ ಹೆಚ್ಚು ಮೃದುತ್ವ ತೋರಿಸಿದ್ದರು. ಇದನ್ನು ಸರ್ಕಾರ "ದೌರ್ಬಲ್ಯ" ಎಂದು ಭಾವಿಸುವ ಸಾಧ್ಯತೆ ಇತ್ತು.

ಅಂತೂ ಅನೇಕ ತಪ್ಪುಗಳು ಮುಖಂಡರಿಗೆ ತಿಳಿಯದೆಯೇ ನಡೆದು ಹೋಗಿದ್ದವು. ಚಳವಳಿಯ ಮೇಲೆ ಅದರ ಪರಿಣಾಮವೂ ಇತ್ತು.

ಅಧಿಕಾರಿಗಳು, ರಾಜಕೀಯ ಮತ್ತು ಸರ್ಕಾರ : ಸರ್ಕಾರದ ಚೇಲಾಗಳಾಗಿ ವರ್ತಿಸುತ್ತಿದ್ದ ಹಲವು ಅಧಿಕಾರಿಗಳು ರೈತ ಮುಖಂಡರಿಗೆ ತಲೆನೋವಾಗಿದ್ದರು. ಬಡ್ತಿಗಾಗಿಯೋ ಅಥವಾ ಮುಖ್ಯಮಂತ್ರಿಗಳ ಒಲುಮೆ ಗಳಿಸುವುದಕ್ಕೋ ಆಶಿಸಿ ಈ ಅಧಿಕಾರಿಗಳು ಚಳವಳಿಯನ್ನು ನಿಲ್ಲಿಸುವಂತೆ ಮುಖಂಡರನ್ನು ಕಾಡಿದರು. ಕೆಲವರು "ನಾವೂ ರೈತರೇ, ನಮಗೂ ರೈತರ ಹಿತ ಮುಖ್ಯ" ಇತ್ಯಾದಿ ಬೆಣ್ಣೆ ಮಾತುಗಳನ್ನಾಡಿದರು. ಒಬ್ಬ ತಮಿಳನಂತೂ ಬೆಂಗಳೂರಿನಲ್ಲಿ ಮಾತುಕತೆಗೆಂದು ರೈತ ಸಮನ್ವಯ ಸಮಿತಿ ಸದಸ್ಯರು ಹೋದಾಗ, ಒಂದಿಬ್ಬರು ಮಲೆನಾಡಿನ ರೈತ ಮುಖಂಡರನ್ನು ಗುಟ್ಟಾಗಿ ಕಂಡು "ಮುಖ್ಯಮಂತ್ರಿಗಳು ನಿಮಗೆ ಮಾತ್ರ ಬೆಲೆ ಕೊಡುವುದು, ನೀವೇ ನಾಯಕರು, ನೀವು ಮಾತ್ರ ಮಾತುಕತೆಗೆ ಬನ್ನಿ. ಉಳಿದವರೆಲ್ಲ ಯಾಕೆ ?" ಎನ್ನುವ ಮಾತನ್ನೂ ಆಡಿದ್ದ.

ಸರ್ಕಾರದ ಆದೇಶ ಹೊತ್ತು ಚಳವಳಿಯನ್ನು ಮುರಿಯಲು ಯತ್ನಿಸಿದರು ಅನೇಕರು. ಇವರಲ್ಲಿ ಮಂತ್ರಿಗಳು, ಶಾಸಕರು, ಸಂಸತ್ ಸದಸ್ಯರು, ಪುಢಾರಿಗಳು, ಹೀಗೆ ಹಲವರು. ಶಿವಮೊಗ್ಗದಲ್ಲೇ ಬೀಡುಬಿಟ್ಟು, ತಂತ್ರಗಳನ್ನು ಯೋಚಿಸುತ್ತ ಸುಖವಾಗಿ ಉಂಡು-ಕುಡಿದು "ಕರ್ತವ್ಯ" ಪಾಲಿಸಿದವರೂ ಉಂಟು. ಕೆಲವರು ಬಾಡಿಗೆ ಗೂಂಡಾಗಳನ್ನು ಹಿಡಿದು ಕುಡಿಸಿ ಚಳವಳಿಯ ಗುಂಪಿನೊಳಗೆ ನುಗ್ಗಿಸಲು ಯತ್ನಿಸಿದರು. ಶಿವಮೊಗ್ಗ ನಗರದಲ್ಲಿ ಸಣ್ಣ–ಪುಟ್ಟ ಗಲಭೆಗಳೂ ಈ ಗೂಂಡಾಗಳಿಂದ ನಡೆದವು. (ಇವರಲ್ಲಿ ಕೆಲವರು ಹತ್ತಿರದ ಹಳ್ಳಿಯಿಂದಲೂ ಬಂದವರಿದ್ದರು.) ರೈತರೊಡನೆ ಮಾತುಕತೆ ನಡೆಸಿ ಸಂಧಾನಕ್ಕೆ ಒಪ್ಪಿಸಲೂ ಹಲವರು ಹೆಣಗಿದರು. ಮುಖಂಡರು ಕೆಲವರ ಬಳಿಗೂ ಸುಳಿಯಲಿಲ್ಲ.

ಸರ್ಕಾರ ಸರ್ವ ಸಾಹಸ ಮಾಡಿತು. ಚಳವಳಿಯ ನೇತೃತ್ವ ವಹಿಸಿರುವವರಲ್ಲಿ ಹೆಚ್ಚಾಗಿ ಕಬ್ಬು ಬೆಳೆಗಾರರೇ ಇದ್ದಾರೆ ಎಂಬುವನ್ನು ಅರಿತು, ಚಳವಳಿ ನಡೆಯುತ್ತಿದ್ದ ಸಂದರ್ಭದಲ್ಲೇ ಬತ್ತ ಮತ್ತು ಕಬ್ಬಿನ ಬೆಲೆಯನ್ನು ಒಂದಿಷ್ಟು ಏರಿಸಿತು. ಅಲ್ಲಿಗೂ ರೈತ ಮುಖಂಡರು ಮರುಳಾಗದೆ ಹೋದಾಗ ಸ್ಥಳೀಯ ಬೇಡಿಕೆಗಳನ್ನು ಈಡೇರಿಸುವ ನೆಪದಲ್ಲಿ ತಕ್ಷಣ ತುಂಗಾ ಮತ್ತು ಭದ್ರಾ ಪ್ರದೇಶದ ನೀರಾವರಿ ರಸ್ತೆಗಳ ದುರಸ್ತಿ ಕಾರ್ಯ ಕೈಗೊಳ್ಳುವುದಾಗಿ ಪ್ರಕಟಿಸಿತು. ಈ ಪ್ರಕಟಣೆ ಎಷ್ಟೊಂದು ಪೊಳ್ಳು ಭರವಸೆಯಾಗಿತ್ತೆಂದರೆ ಈ ದುರಸ್ತಿ ಕಾರ್ಯ ಆರಂಭವಾಗಲೇ ಇಲ್ಲ. (ಮಲೆ

ನಾಡ ರೈತರ ಚಳವಳಿ ಇಡೀ ಜಿಲ್ಲೆಯನ್ನು ವ್ಯಾಪಿಸಿತ್ತಾದರೂ, ಬಿರುಸಿನಿಂದ ಚಳವಳಿ ನಡೆಸುತ್ತಿದ್ದವರು ಮತ್ತು ಚಳವಳಿಯ ನೇತೃತ್ವ ವಹಿಸಿದವರಲ್ಲಿ ಅನೇಕರು ಈ ಭಾಗದವರು) ಅಧಿಕಾರಿಗಳೇ ಹೇಳಿದಂತೆ ಈ ರಸ್ತೆಗಳು ಸಕ್ಕರೆ ಕಾರ್ಖಾನೆಗೆ ಬಂದು ಸೇರುವಂಥವು.

ಸಂಧಾನದ ನಾಟಕ : ಸರ್ಕಾರಕ್ಕೆ ರೈತ ಚಳವಳಿ ನಿಲ್ಲುವುದು ಮಾತ್ರ ಬೇಕಾಗಿತ್ತು. ರೈತರ ಹಿತವಾಗಲಿ, ಅವರ ನೋವಾಗಲಿ ಎಷ್ಟೂ ಬೇಕಿರಲಿಲ್ಲ ಎಂಬುದೂ ಅಕ್ಟೋಬರ್ 17 ರಂದು ನಡೆದ ಸಂಧಾನದಿಂದ ವ್ಯಕ್ತವಾಯಿತು. ಮುಖ್ಯಮಂತ್ರಿಗಳೊಂದಿಗೆ ಮಾತುಕತೆ ನಡೆದರೆ ನಮ್ಮೆಲ್ಲ ಬೇಡಿಕೆಗಳೂ ತಕ್ಷಣ ಈಡೇರಿಬಿಡುತ್ತದೆ, ಎಂದು ಭ್ರಮಿಸಿಕೊಂಡಿದ್ದ ರೈತ ನಾಯಕನಿಗೆ ನಿರಾಶೆಯಾಯಿತು. ಕೋಪ ಬಂತು. ಆದರೆ ಕಾಲ ಮಿಂಚಿತ್ತು. ರೈತರು ನಂಬಿ ಕೆಟ್ಟಿದ್ದರು.

19 ಬೇಡಿಕೆಗಳಲ್ಲಿ ಮಂತ್ರಿ ಮಂಡಲದ ಮೊದಲ ಸಭೆಯಲ್ಲೇ 11 ಬೇಡಿಕೆಗಳಿಗೆ ಅನುಮೋದನೆ ಸಿಕ್ಕಿತ್ತು. 'ರಾಜ್ಯದ ರೈತರಿಗೆಲ್ಲಾ ದಸರಾ ಕೊಡುಗೆ' ಎಂದು ಪತ್ರಿಕೆಗಳು ಬ್ಯಾನರ್ ಹೆಡ್‌ಲೈನ್‌ನಲ್ಲಿ ಸುದ್ದಿ ಪ್ರಕಟಿಸಿದವು. ಅನೇಕರು ಇನ್ನೇನು ರೈತ ಚಳವಳಿ ಮುಗಿಯಿತು ಎಂದು ಭಾವಿಸಿದ್ದರು.

ಆದರೆ ನಡೆದದ್ದು ಬೇರೆ. ಬೇಡಿಕೆಗಳೊಂದಿಗೆ ಸರ್ಕಾರ ಸರಸವಾಡಿತ್ತು. ಎಚ್ಚರಿಕೆಯಿಂದ ಪರಿಶೀಲಿಸಿದಾಗ ಅವೆಲ್ಲ ಮೋಸದ, ಜಾಣತನದ ಉತ್ತರಗಳಾಗಿದ್ದವೇ ಹೊರತು ಬೇಡಿಕೆಗಳನ್ನು ಈಡೇರಿಸಿದ ಮಾತುಗಳಾಗಿರಲಿಲ್ಲ. 'ಕೊಲೆ ಆಪಾದನೆಗೆ ಸಂಬಂಧಿಸಿದವರನ್ನು ಬಿಟ್ಟು ರೈತ ಚಳವಳಿ ಸಂಬಂಧದಲ್ಲಿ ರಾಜ್ಯಾದ್ಯಂತ ಬಂಧಿತರಾಗಿರುವ ಎಲ್ಲರನ್ನೂ ಬೇಷರತ್ತಾಗಿ ಬಿಡುಗಡೆ ಮಾಡಲು ಸರ್ಕಾರ ಆಜ್ಞಾಪಿಸಿತ್ತು. ಇದು ರೈತರ ಬೇಡಿಕೆಗಳ ಪಟ್ಟಿಯಲ್ಲಿ ಮೊದಲನೆಯದು. ಆದರೆ ಕೊಲೆ ಸಂಬಂಧದಲ್ಲಿ ಜೈಲಿನಲ್ಲಿರುವವರ ಸಂಖ್ಯೆ ಎಷ್ಟು ? ಎಂಬ ಪ್ರಶ್ನೆಗೆ ಮುಖ್ಯಮಂತ್ರಿಗಳು 'ಕೇವಲ ಕೆಲವೇ ಮಂದಿ' ಎಂದು ಜಾರಿಕೊಳ್ಳುವ ಉತ್ತರ ಕೊಟ್ಟರು. (ಇದಕ್ಕೆ ಯಾಕಿಷ್ಟು ಪ್ರಾಮುಖ್ಯ ಎಂದರೆ ಮುಂದೆ ಸರ್ಕಾರ ಇದನ್ನು ದುರುಪಯೋಗಪಡಿಸಿಕೊಂಡಿತು. ರೈತ ಮುಖಂಡರ ಮಾತಿನಲ್ಲೇ ಹೇಳುವುದಾದರೆ ಸುಳ್ಳು ಪುರಾವೆ ಸೃಷ್ಟಿಸಿ ಹಲವರ ಮೇಲೆ ಆಪಾದನೆ ಹೊರಿಸಿ ವಿಚಾರಣೆಗೆ ಗುರಿಮಾಡಿತು)

ಹಲವು ಬೇಡಿಕೆಗಳನ್ನು ಪುನರ್‌ಪರಿಶೀಲಿಸುವುದಾಗಿ ಹೇಳಿದ ಸರ್ಕಾರ ಮತ್ತೆ ಕೆಲವು ಬೇಡಿಕೆಗಳಿಗೆ "ತಾತ್ವಿಕ" ಅನುಮೋದನೆ ನೀಡಿತು. ಉಳಿದವುಗಳ ಬಗ್ಗೆ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಮಾತನಾಡಿತು.

ಯೋಜನಾ ವೆಚ್ಚದಲ್ಲಿ ಗ್ರಾಮಾಂತರ ಪ್ರದೇಶಕ್ಕೆ ಶೇ. 80ರಷ್ಟು ಹಣವನ್ನು ನೀಡಬೇಕೆಂಬ ಬೇಡಿಕೆಯನ್ನು "ಅಂಗೀಕರಿಸಿದ" ಸರ್ಕಾರ "ಈಗ ಶೇ. 64 ರಷ್ಟು ಹಣವನ್ನು ಒದಗಿಸಲಾಗಿದ್ದು, ಉಳಿದದ್ದನ್ನು ಕ್ರಮೇಣ ಶೇ. 80ಕ್ಕೆ ಹೆಚ್ಚಿಸಲಾಗುವುದೆಂದು" ತಿಳಿಸಿತು. ('ಕ್ರಮೇಣ'–ಇಂಥ ಶಬ್ದಗಳಿಗೆ ಸರ್ಕಾರದ ಶಬ್ದ ಭಂಡಾರದಲ್ಲಿ ಏನು ಅರ್ಥ ಎಂಬುದನ್ನು ಎಲ್ಲರೂ ಬಲ್ಲರು.)

ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕೆಂಬ ಬೇಡಿಕೆಯನ್ನು ಮಾನ್ಯಮಾಡಿ ಆ ಬಗ್ಗೆ ಮೂರು ವರ್ಷದ ಯೋಜನೆ ರೂಪಿಸಲಾಗಿದೆ ಎಂದು ಘೋಷಿಸಿತು.

ರೈತರಿಗೆ ಕೊಡುವ ಸಾಲದ ಪ್ರಮಾಣವನ್ನು ಹೆಚ್ಚಿರುವ ವ್ಯವಸಾಯ ವೆಚ್ಚದ ಪ್ರಮಾಣಕ್ಕೆ ತಕ್ಕಂತೆ ಹೆಚ್ಚಿಸಲು ಸರ್ಕಾರ ನಿರ್ಧರಿಸಿತು. (ರೈತರ ಬಗ್ಗೆ ಈ ಸರ್ಕಾರಕ್ಕೆ ನಿಜವಾದ ಕಾಳಜಿ ಇದ್ದಿದ್ದರೆ ಇಂಥ 'ಅಸ್ಪಷ್ಟ' ಮಾತುಗಳಲ್ಲಿ ಹೇಳುವ ಬದಲು ಕರಾರುವಾಕ್ಕಾಗಿ ಇಷ್ಟೇ ಕೊಡುತ್ತೇವೆ ಎಂದು ಹೇಳಬಹುದಿತ್ತು. ಬೇಡಿಕೆಗಳ ಪಟ್ಟಿ ಅನೇಕ ತಿಂಗಳುಗಳಿಂದ ಸರ್ಕಾರದ ಬಳಿ ಇತ್ತು).

ಬೆಳೆ ವಿಮೆ ಯೋಜನೆಯನ್ನು ರಾಜ್ಯಾದ್ಯಂತ ಜಾರಿಗೆ ತರಲು "ತಾತ್ವಿಕವಾಗಿ" ಸಮ್ಮತಿಸಿದ ಸರ್ಕಾರ, ಹೇಗೆ, ಯಾವ ಬೆಳೆಗೆ, ಮುಂತಾದ ವಿವರಗಳನ್ನು ಪರಿಶೀಲಿಸುತ್ತಿದೆ.

ಕೈಗಾರಿಕಾ ಕಾರ್ಮಿಕರಿಗೆ ಕೊಡುತ್ತಿರುವ ಎಲ್ಲಾ ಸೌಲಭ್ಯಗಳೂ ದೊರಕುವಂತೆ, ಕೃಷಿಯನ್ನು ಉದ್ಯಮವೆಂದು ಸರ್ಕಾರ ಘೋಷಿಸಿ ಪ್ರತಿಕುಟುಂಬವನ್ನು ಒಂದು ಔದ್ಯೋಗಿಕ ಘಟಕವೆಂದು ಪರಿಗಣಿಸಬೇಕೆಂಬ ಬೇಡಿಕೆಯನ್ನು "ತಾತ್ವಿಕವಾಗಿ" ಒಪ್ಪಲಾಗಿದೆ.

ಮೇಲಿನ ಎರಡು ಬೇಡಿಕೆಗಳ ಸರ್ಕಾರ ಘೋಷಿಸಿದ "ತಾತ್ವಿಕ" ಈಡೇರಿಕೆಯಿಂದ ಯಾವ ರೈತನಿಗೆ ಪ್ರಯೋಜನವಾಗುತ್ತದೆ ? ಹೀಗೆ ಬೇಡಿಕೆಗಳನ್ನು ಈಡೇರಿಸುವುದರ ಹಿಂದಿನ ಉದ್ದೇಶ ಯಾವುದು ?

ಅಂತೂ ಸರ್ಕಾರ ಸಂಧಾನದ ನಾಟಕ ಮುಗಿಸಿತು. ರೈತ ಮುಖಂಡರೆಲ್ಲ "ಬನ್ನಿ ಮುಡಿಯಲು" ತಮ್ಮ ತಮ್ಮ ಊರುಗಳಿಗೆ ಧಾವಿಸಿದರು.

ನಂತರ ನಡೆದ ಸಚಿವ ಸಂಪುಟದಲ್ಲಿ ಏಳು ಬೇಡಿಕೆಗಳ (ಒಂದು ಬೇಡಿಕೆಯು ಚರ್ಚೆಯನ್ನು ಮುಂದಕ್ಕೆ ಹಾಕಲಾ ಗಿತ್ತು) ಚರ್ಚೆ ನಡೆದು ಪ್ರಕಟವಾದ

ತೀರ್ಮಾನದಲ್ಲಿ ಭತ್ತ, ರಾಗಿ, ಜೋಳ. ಕಬ್ಬು, ಸೇಂಗಾಗಳಿಗೆ ಬೆಂಬಲ ಬೆಲೆ ನೀಡಿದ್ದಾಗಮನ ಸೆಳೆಯುವಂತಿತ್ತು. ಮತ್ತೊಂದು ಬೇಡಿಕೆ (ರೈತ ಕಾರ್ಮಿಕರಿಗೂ ಕೈಗಾರಿಕಾ ಕಾರ್ಮಿಕರಿಗೆ ದೊರೆಯುವಂತೆ ಕೂಲಿ ಹಾಗು ಇತರ ಎಲ್ಲ ಸೌಲಭ್ಯಗಳೂ ದೊರೆಯಬೇಕು)ಯನ್ನೂ ಸರ್ಕಾರ ಪೂರ್ಣವಾಗಿ ಜಾರಿಗೆ ತರದೆ, ವಿಮೆ ಸೌಲಭ್ಯ ಮಾತ್ರ ನೀಡಿರುವುದಾಗಿ ತಿಳಿಸಿತು. ಜೊತೆಗೆ ಸಣ್ಣ–ಮಧ್ಯಮ ರೈತರಿಗೆ ಕ್ಷೇಮನಿಧಿ ಯೋಜನೆ ಜಾರಿಗೆ ತರಲು ನಿರ್ಧರಿಸಿತು. (ಇದು ರೈತರ ಕಣ್ಣೀರನ್ನು ಒರೆಸುವ ಪ್ರಯತ್ನದಂತಿತ್ತು.)

ಅನುಬಂಧ : ಆಗಸ್ಟ್ 11 ರಂದು (1980) ಹುಬ್ಬಳ್ಳಿಯಲ್ಲಿ ನಡೆದ ಮಲಪ್ರಭಾ ನೀರಾವರಿ ಪ್ರದೇಶ ರೈತ ಸಮನ್ವಯ ಸಮಿತಿ ಹಾಗೂ ರಾಯಚೂರು ಶಿವಮೊಗ್ಗ, ಬೆಳಗಾಂ, ಬಿಜಾಪುರ, ಬಳ್ಳಾರಿ ಮತ್ತು ಧಾರವಾಡ ಜಿಲ್ಲಾ ರೈತ ಸಂಘಟನೆಗಳು ಪ್ರತಿನಿಧಿಗಳ ಜಂಟೀ ಸಭೆಯಲ್ಲಿ ರೂಪಿಸಿದ 19 ಬೇಡಿಕೆಗಳು ಹೀಗಿದೆ:

ಬೇಡಿಕೆಗಳು

1. ಕರ್ನಾಟಕದಲ್ಲಿ ನಡೆವ ರೈತ ಚಳುವಳಿಯಲ್ಲಿ ಭಾಗವಹಿಸಿ ಬಂಧನಕ್ಕೊಳಗಾದ ಎಲ್ಲಾ ರೈತರನ್ನು ಮತ್ತು ರೈತ ಮುಖಂಡರನ್ನು ಬೇಷರತ್ತಾಗಿ ತಕ್ಷಣ ಬಿಡುಗಡೆ ಮಾಡಬೇಕು. ಅವರ ಮೇಲಿನ ಎಲ್ಲಾ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಹಾಗೂ ನರಗುಂದ–ನವಲಗುಂದ ಮತ್ತು ಇತರ ಸ್ಥಳಗಳಲ್ಲಿ ರೈತರಿಗೆ ನಿಷ್ಕಾರಣವಾಗಿ ಕಿರುಕುಳ ಕೊಡುತ್ತಿರುವ ವಿಶೇಷ ಪೋಲಿಸ್ ಪಡೆಯನ್ನು ತಕ್ಷಣ ಹಿಂದಕ್ಕೆ ತೆಗೆದುಕೊಳ್ಳತಕ್ಕದ್ದು. ಈ ನಿರ್ಣಯವನ್ನು ಸರ್ಕಾರ ತಕ್ಷಣ ಕಾರ್ಯರೂಪಕ್ಕೆ ತರದೇ ಹೋದರೆ ರಾಜ್ಯಾದ್ಯಂತ ರೈತರು ತೀವ್ರ ಹೋರಾಟ ನಡೆಸಬೇಕೆಂದು ತೀರ್ಮಾನಿಸಲಾಗಿದೆ.

2. ವರ್ತಮಾನದಲ್ಲಿ ರೈತರ ಮೇಲಿರುವ ಎಲ್ಲಾ ಸಾಲಗಳನ್ನು ಎಂದರೆ ಕಾಪಿಗ ಕೊಟ್ಟಿ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕ್ ಸಾಲಗಳನ್ನು ಪೂರ್ಣ ಮನ್ನಾ ಮಾಡಬೇಕು. ಮತ್ತು ರೈತರಿಗೆ ತಿರುಗಿ ಶೇಕಡಾ ನಾಲ್ಕು ರೂಪಾಯಿ ಸರಳ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸಿಕೊಡಬೇಕು.

3. ಕೃಷಿಯನ್ನು ಉದ್ಯಮವೆಂದು ಸರ್ಕಾರ ಘೋಷಿಸಿ ಪ್ರತಿಯೊಂದು ಕೃಷಿ ಕುಟುಂಬವನ್ನು ಒಂದು ಔದ್ಯೋಗಿಕ ಘಟಕ ಎಂದು ಪರಿಗಣಿಸಬೇಕು.

5
6
7
8.
9.
10
11.
12.
13.

14. ರೈತ, ವ್ಯವಸಾಯಕ್ಕೆ ಉಪಯೋಗಿಸುವ ವಿದ್ಯುತ್ ಶಕ್ತಿ ದರವನ್ನು ನಮ್ಮ
ರಾಜ್ಯ ... ಕಾರ್ಖಾನೆಗೆ ಕೊಡುವ ದರದಂತೆ ಎಂದರೆ 6½
ಪೈಸೆ ...

15. ರೈ ... ಂತೆ ಟ್ರಾಕ್ಟರ್
... ಟ್ಯಾಕ್ಸನ್ನು
...

16. ... ರಸ್ತೆಗಳಾಗಿ
... ಆರ್.ಎಂ.ಸಿ.
... ಸಬೇಕು.

17. ... ಕೊಡಬೇಕು.

18. ... ಯ ವಾರ್ಷಿಕ

19. ... ಸೀಟುಗಳನ್ನು